ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 10 ಮಾರ್ಚ್ 4, 1984 ಬೆಲೆ 60 ಪೈಸೆ

ಸಾಮ್ರಾಜ್ಯಶಾಹಿ ಆಕ್ರಮಣ ಎದುರಿಸಿರಿ !

ಭಸ್ಮಾಸುರನನ್ನು ನಾಶಮಾಡಿರಿ !

"ಮಾನವ ಕುಲವನ್ನೆ ನಾಶಮಾಡಲು ಹೊರಟಿರುವ ಅಮೇರಿಕದ ಸಾಮ್ರಾಜ್ಯ ಶಾಹಿಗಳ ಯುದ್ಧ ನೀತಿಯನ್ನು ಧೈರ್ಯದಿಂದ ಎದುರಿಸಿ ಆ ಭಸ್ಮಾಸುರನನ್ನು ನಾಶಮಾಡಿ ಸಮಾಜವಾದವನ್ನು ಉಳಿಸಲು ಶ್ರಮಿಸಿರಿ. ರೇಗನ್ ಮತ್ತು ಅವರ ಬೆಂಬಲಿಗರು ಯುದ್ಧ ಯಾಕೆ ಹೂಡುತ್ತಿದ್ದಾರೆಂದು ಸರ್ವ ಸಾಮಾನ್ಯ ಜನರಿಗೆ ತಿಳಿಸಿ ಹೇಳಿರಿ ಶಾಂತಿ ಚಳುವಳಿಯ ಮಹತ್ವವನ್ನು ಪ್ರಚಾರ ಮಾಡಿರಿ" ಎಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್ ನಂಬೂದಿರಿ ಪಾಡ್ ಅವರು ಕರ್ನಾಟಕ ರಾಜ್ಯ ಸಮಿತಿ ಸದಸ್ಯರಿಗೆ ವಿವರಣೆ ನೀಡಿದರು.

ಸಾಮ್ರಾಜ್ಯ ಶಾಹಿ ಎಲ್ಲರ ಸರ್ವ ಸಾಮಾನ್ಯ ಶತ್ರು. ತಟಸ್ಥ ರಾಷ್ಟ್ರಗಳೂ, ಭಾರತದಂತ ಸ್ವಾತಂತ್ರ ಪಡೆದ ದೇಶಗಳೂ, ಸಾಮ್ರಾಜ್ಯ ಶಾಹಿಗಳ ಯುದ್ಧ ಖೋರ ನೀತಿ ಕುರಿತು ಸ್ಪಷ್ಟ ಅಭಿಪ್ರಾಯ ತಾಳಬೇಕು. ಈ ರಾಜ್ಯಗಳ ಹಾಗೆಯೇ ನಮ್ಮ ದೇಶದ ಆಳುವ ಪಕ್ಷಗಳು ಪ್ರಜಾಪ್ರಭುತ್ವ ವಿರೋಧಿ ನಿಲುವು ಅನುಸರಿಸುತ್ತಿರುವುದರಿಂದ ಸಾಮ್ರಾಜ್ಯ ಶಾಹಿಗಳ ವಿರುದ್ಧ, ಅಣು ಯುದ್ಧ ಹಾಗೆಯೇ ಶಾಂತಿಗಾಗಿ ನಡೆಯುವ ಚಳುವಳಿಯಲ್ಲಿ ಜನ ಸಾಮಾನ್ಯರನ್ನು ಹೋರಾಟಕ್ಕಿಳಿಸಲು ಅಸಮರ್ಥರಾಗಿದ್ದಾರೆ. ಶಾಂತಿ ಕಾರ್ಯಕ್ರಮಗಳಲ್ಲಿ ಇಂದಿರಾ ಕಾಂಗ್ರೆಸ್ಸಿನವರು 20 ಅಂಶಗಳ ಕಾರ್ಯಕ್ರಮದ ಕುರಿತೇ ಹೂಡುತ್ತಿರುವುದರಿಂದ ಜನ ಸಾಮಾನ್ಯರನ್ನು ಆಕರ್ಷಿಸುವಲ್ಲಿ ವಿಫಲರಾಗಿದ್ದಾರೆ.

ಎಲ್ಲ ಬಂಡವಾಳ ಶಾಹಿ ಪಕ್ಷಗಳು ಸಾಮ್ರಾಜ್ಯ ಶಾಹಿಗಳನ್ನು ವಿರೋಧಿಸುತ್ತಿಲ್ಲ. ಶಾಂತಿಗಾಗಿ ಪ್ರಯತ್ನ ಮಾಡುತ್ತಿಲ್ಲ. ನಾವು ಸ್ವತಂತ್ರವಾಗಿಯೇ ಶಾಂತಿ ಚಳುವಳಿ ನಡೆಸಿದರೆ ಇಂದಿರಾ ಸರಕಾರದ ಹಾಗೆಯೇ ಇತರ ಸರಕಾರಗಳ ನೀತಿಯನ್ನು ಬಯಲಿಗೆಳೆಯಲು ಶಕ್ಯವಾಗುತ್ತದೆ.

ತಟಸ್ಥ ರಾಷ್ಟ್ರಗಳು ಶಾಂತಿಗಾಗಿ ಇಂದಿರಾ ಜೊತೆಯಲ್ಲೂ ಸೇರುತ್ತವೆ. ನಮ್ಮ ಜೊತೆಯಲ್ಲೂ ಕೂಡಿಕೊಳ್ಳುತ್ತವೆ. ಕ್ಯೂಬಾ, ವಿಯಟ್ ನಾಮ್‌ಗಳು ಶಾಂತಿ ಕುರಿತು ನಿರ್ದಿಷ್ಟ ನಿಲುವು ವಹಿಸುತ್ತಿವೆ. ಅವು ಕೂಡ ತಟಸ್ಥ ರಾಷ್ಟ್ರಗಳ ಕೂಟದಲ್ಲಿವೆ. ಈ ಕೂಟ ಅಮೇರಿಕದ ಧೋರಣೆಯನ್ನು ವಿರೋಧಿಸುತ್ತಿರುವುದರಿಂದಲೇ ಸಂಯುಕ್ತ ರಾಷ್ಟ್ರ ಸಂಘದಿಂದ ಹೊರಗೆ ಬರುವ ಅಂಜಿಕೆ ಹಾಕುತಿದೆ ಅಮೇರಿಕ. ಆದ್ದರಿಂದ ನಮ್ಮ ಕಾರ್ಮಿಕ ವರ್ಗದ ಕ್ರಾಂತಿಕಾರಿ ವರ್ಗದ ಹಿತದ ಸಲುವಾಗಿಯೇ ಶಾಂತಿ ಚಳುವಳಿಯನ್ನು ಬಲಪಡಿಸುವುದು ಅತ್ಯಗತ್ಯ. ಈ ಹಿಂದೆ ನಮಗೆ ಹೆಚ್ಚು ಜನರ ಬೆಂಬಲ ಸಿಗುತ್ತಿದ್ದಿಲ್ಲ, ನಾವು ಒಬ್ಬಂಟಿಗರಾಗಿಯೇ ಉಳಿದಿವೆವು. ಈಗ ನಮಗೆ ಹೆಚ್ಚು ಜನರ ಬೆಂಬಲವಿದೆ.

ನಮ್ಮದು ಕಾರ್ಮಿಕ ವರ್ಗದ, ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಪಕ್ಷ. ಶಾಂತಿಗಾಗಿ, ಅಣುಯುದ್ಧದ ವಿರುದ್ಧವಾಗಿ ನಾವು ನಡೆಸುವ ಹೋರಾಟ ಸಾಮ್ರಾಜ್ಯ ಶಾಹಿ ವಿರುದ್ಧ ಹೋರಾಟವಾಗಿದೆ, ಸಮತಾವಾದಕ್ಕಾಗಿ ನಡೆಸುವ ಹೋರಾಟವಾಗಿದೆ.

ರಶ್ಯಾ ದೇಶದಲ್ಲಿ 1917ರಲ್ಲಿ ಕ್ರಾಂತಿ ನಡೆದಾಗ ಎಲ್ಲ ಬಂಡವಾಳ ಶಾಹಿ ದೇಶಗಳು ಅದನ್ನು ವಿರೋಧಿಸಿದವು. ತಮ್ಮ ಸೈನಿಕರಿಂದ ರಶ್ಯಾ ದೇಶದ ಮೇಲೆ ಆಕ್ರಮಣ ಮಾಡಿಸಿದರು. ರಶ್ಯದ ಪ್ರತಿಗಾಮಿಶಕ್ತಿಗಳು ಅವರಿಗೆ ಬೆಂಬಲ ನೀಡಿದರು. ಇಷ್ಟಾದರೂ ಕೂಡ ಸಮತಾವಾದಿ ಶಕ್ತಿ ಬೆಳೆಯಿತು. ಈ ಬೆಳವಣಿಗೆಯನ್ನು ಕಂಡೇ ಹಿಟ್ಲರ್ ಇತರ ಸಾಮ್ರಾಜ್ಯ ಶಾಹಿಗಳ ಬೆಂಬಲದಿಂದ 1933 ರಲ್ಲಿ ರಶ್ಯಾ ದೇಶದ ಮೇಲೆ ಆಕ್ರಮಣ ಮಾಡಿದ. ರಶ್ಯದಲ್ಲಿ ನೆಲೆಸಿರುವ ಸಮತಾವಾದಿ ಶಕ್ತಿಯನ್ನು ನಾಶ ಮಾಡುವುದೇ ಇದರ ಉದ್ದೇಶವಾಗಿತ್ತು. ಮೂಲವರ್ಗ ಶಕ್ತಿ, ಕೆಂಪು ಸೈನ್ಯ, ಹಾಗೆಯೇ ಇತರ ಜನತೆಯ ಬೆಂಬಲದಿಂದಾಗಿಯೇ ಬಲವಾದ ಈ ಆಕ್ರಮಣವನ್ನು ಎದುರಿಸಲು ಸಾಧ್ಯವಾಯಿತು. ಈಗ ರೇಗನ್ ಅವರು ಹಿಟ್ಲರನ ತಂತ್ರವನ್ನೇ ಉಪಯೋಗಿಸುತ್ತಿದ್ದಾರೆ.

ಅಮೇರಿಕ ಯುರೋಪ್ ಖಂಡದಿಂದ ಅಣ್ವಸ್ತ್ರ ಉಪಯೋಗಿಸಿದರೆ ಸಮುದ್ರದಿಂದ ನಾವು ಅಂಥದ್ದೇ ಅಸ್ತ್ರ ಉಪಯೋಗಿಸುವುದಾಗಿ ಆಂದ್ರೋಪೋವ್ ಹೇಳಿದ್ದರು.

ಗುತ್ತೇದಾರಿ ರಾಷ್ಟ್ರಗಳು ಅಣ್ವಸ್ತ್ರಗಳನ್ನೇ ಶೇಖರಿಸಿಡುವ ಕಾರ್ಯದಲ್ಲಿ ತೊಡಗಿದರೆ ಬಿಕ್ಕಟ್ಟನ್ನೆದುರಿಸಬೇಕಾದೀತು. ಅವಶ್ಯಕ ವಸ್ತುಗಳನ್ನ ಉತ್ಪಾದಿಸುವಲ್ಲಿ ವಿಫಲವಾಗಬಹುದು. ಹಾಗಾದರೆ ಜನ ರೊಚ್ಚಿಗೇಳುತ್ತಾರೆ.

ತಟಸ್ಥ ರಾಷ್ಟ್ರಗಳು ಯುದ್ಧವನ್ನು ವಿರೋಧಿಸುವ ರಶ್ಯಾ ದೇಶಕ್ಕೆ ಬೆಂಬಲ ನೀಡಬೇಕಾಗುತ್ತದೆ. ಯಾಕೆಂದರೆ ಯುದ್ಧದ ಭೀತಿ ತಪ್ಪಿದರೆ, ತಮ್ಮ ಆದಾಯವನ್ನು, ಸಂಪತ್ತನ್ನು ರಾಷ್ಟ್ರದ ಅಭಿವೃದ್ಧಿಗಾಗಿ ಉಪಯೋಗಿಸಬಹುದು.

ಯುದ್ಧ ನಿಜವಾಗಿಯೂ ಆಗಬಹುದು ಯುದ್ಧದ ತಯಾರಿಮಾಡಲು ಬಂಡವಳ ಶಾಹಿ ರಾಷ್ಟ್ರಗಳಿಗೆ ಸಾಧ್ಯವಿದೆ.

ರೇಗನ್ ಹತ್ತಿರ ಕಪ್ಪು ಕೀಲಿಯ ಪೆಟ್ಟಿಗೆ ಇದೆಂದೂ ಅದನ್ನು ತೆರೆದರೆ ಅಣು ಯುದ್ಧ ಪ್ರಾರಂಭವಾಗುತ್ತದೆಂದೂ ನಮಗೆ ಮತ್ತು ಸಮತಾವಾದಿ ದೇಶಗಳಿಗೆ ಗೊತ್ತಿಲ್ಲ. ಆದರೆ ಯುರೋಪ್ ಖಂಡದ ದೇಶಗಳಿಗೆ ಅದು ಗೊತ್ತು. ಯಾಕೆಂದರೆ ಅವರು ಈಗಾಗಲೇ ಯುದ್ಧವನ್ನೆದುರಿಸಿದ್ದಾರೆ. ಆದ್ದರಿಂದ ಯುದ್ಧದಿಂದ ಯಾರೂ ತಪ್ಪಿಸಿಕೊಳ್ಳಲು ಶಕ್ಯವಿಲ್ಲ.

ಇದರಿಂದಾಗಿ ಯುದ್ಧ ಆಗಿಯೇ ತೀರುತ್ತದೆಂಬ ನಿರ್ಣಯಕ್ಕೆ ಬರುವುದೂ ತಪ್ಪೇ. ಯಾಕೆಂದರೆ ಅಂಥ ಯುದ್ಧಗಳ ವಿರುದ್ಧ ಜನತೆ ಹೋರಾಡುತ್ತಿದ್ದಾರೆ. ಅಂಥ ಯುದ್ಧದ ವಿರುದ್ಧ ಜನರ ಚಳುವಳಿ ಬೆಳೆದು ಬರುತ್ತಿರುವುದಿಂದಲೇ, ಬಂಡವಾಳ ಶಾಹಿ ದೇಶಗಳಲ್ಲಿ ಜನರ ಪ್ರತಿರೋಧ ಹೆಚ್ಚಾಗುತ್ತಿದೆ.

ಯೂರೋಪಿನಲ್ಲಿ ಅಣ್ವಸ್ತ್ರ ಸ್ಥಾಪಿಸುವ ತನಕ ಮಾತ್ರ ಪ್ರತಿರೋಧ ಮುಂದುವರಿಯುತ್ತದೆಂದು ಅನಂತರ

(8 ನೇ ಪುಟ ನೋಡಿ)

ಹೆಗಡೆ ಸರಕಾರ ಉರುಳಿಸುತ್ತೇವೆ. ಇಂದಿರಾ ಉವಾಚ

"ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮೋಸಗಾರಿಕೆ, ಅಧಕ್ಷತೆಗಳು ತುಂಬಿ ತುಳುಕುತ್ತಿರುವ ಕರ್ನಾಟಕ ಸರಕಾರದ ಕುರಿತು ಅಲ್ಲಿಯ ಜನತೆ ತಮ್ಮ ಅಸಮಾಧಾನವನ್ನು ಈಗಾಗಲೇ ವ್ಯಕ್ತ ಮಾಡಿದ್ದಾರೆ. ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷದ ಸಂಕಷ್ಟಗಳಿಂದಾಗಿ ರಾಜ್ಯದ ಜನತಾ ಸರಕಾರ ತನ್ನ ಅಸ್ಥಿರ ಆಳಿಕೆಯನ್ನು ಮುಂದುವರಿಸಿದೆ." ಎಂದೂ, ಇಂಥ ಪರಿಸ್ಥಿತಿಯಲ್ಲಿ ಭದ್ರ ಸರಕಾರ ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಅತ್ಯಗತ್ಯವೆಂದೂ, ರಾಜ್ಯದ ಯೋಜನಾಬದ್ಧ ಬೆಳವಣಿಗೆಗೂ, ಪದ್ಧತಿ ಪೂರ್ವಕವಾದ ಅಭಿವೃದ್ಧಿಗೂ ಅದು ಅವಶ್ಯಕವೆಂದೂ" ಕಾಂಗ್ರೆಸ್ (ಐ) ಯ ಕೇಂದ್ರ ತನ್ನ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತ ಮಾಡಿದೆ.

ಕಾಂಗ್ರೆಸ್ (ಐ) ಯ ಪ್ರಧಾನ ಕಾರ್ಯದರ್ಶಿ ಚಂದೂಲಾಲ್ ಚಂದ್ರಾಕರ ಅವರು ದಿಲ್ಲಿಯಿಂದ ಬಿಡುಗಡೆ ಮಾಡಿದ "ಕರ್ನಾಟಕದಲ್ಲಿ ರಾಜಕೀಯ ಪರಿಸ್ಥಿತಿ" ಎಂಬ ದಸ್ತಾವೇಜಿನಲ್ಲಿ ಮೇಲಿನ ಅಂಶ ಒಳಗೊಂಡಿದ್ದು ಕರ್ನಾಟಕದ ಹೆಗಡೆ ಸರಕಾರವನ್ನು ಉರುಳಿಸಿಯೇ ತೀರುತ್ತೇವೆಂಬ ಅಂಶವನ್ನು ಪ್ರತ್ಯಕ್ಷವಾಗಿಯೇ ಬಹಿರಂಗಗೊಳಿಸಿದ್ದಾರೆ.

"ತನ್ನನ್ನು ಭೂತದಂತೆ ಬೆನ್ನು ಹತ್ತಿದ್ದಾರೆಂಬ ನೆವದಿಂದ ಜನತೆಯ ಬೆಂಬಲ ಪಡೆಯಲು ಕೇಂದ್ರದಲ್ಲಿ ಆಳುತ್ತಿರುವ ಪಕ್ಷದ ವಿರುದ್ಧ ಅಲ್ಲದ ಸಲ್ಲದ ಕುತಂತ್ರಗಳನ್ನು ಪ್ರಯೋಗ ಮಾಡಲಾಗುತ್ತಿದೆ. ಹೀಗೆ ಮಾತ್ರ ಅಧಿಕಾರಕ್ಕೆ ಅಂಟಿಕೊಳ್ಳಲು ಪ್ರಯತ್ನ ನಡೆದಿದೆ ಎಂದು ಹೇಳಿ "ಅಲ್ಪ ಬೆಂಬಲದ ಸರಕಾರ ಉರುಳಿಸಲು ಕಾಂಗ್ರೆ ಪಕ್ಷ ಪ್ರಯತ್ನ ಮಾಡಿದ್ದರೆ ಕೆಲವು ತಿಂಗಳ ಹಿಂದೆಯೇ ಸರಕಾರ ಉರುಳಿ ಬೀಳುತ್ತಿತ್ತು" ಎಂದು ಆ ದಸ್ತಾವೇಜು ಭವಿಷ್ಯ ಹೇಳಿದೆ.

ಇದರಿಂದ ಏನು ಸ್ಪಷ್ಟವಾಗುತ್ತದೆಂದರೆ, 1983 ಜನೇವರಿ ಪ್ರಥಮ ವಾರದಲ್ಲಿ ಜನತಾ ಪಕ್ಷ ಸರಕಾರ ರಚಿಸಲು ಸಿದ್ಧತೆ ನಡೆಸುತ್ತಿರುವಾಗಲೇ ಕೇಂದ್ರದ ಮಂತ್ರಿ ಭೂಟಾಸಿಂಗ್ ಅವರು ಹಣದ ಚೀಲದೊಡನೆಯೇ ಹಲವಾರು ದಿವಸ ಬೆಂಗಳೂರಿನಲ್ಲಿಯೇ ವಾಸವಾಗಿದ್ದು ಎಲ್ಲಾ ತರದ ಕುತಂತ್ರಗಳ ಬಾಣ ಬಿಟ್ಟಿದ್ದಾರೆ-ದು ಎಲ್ಲರಿಗೂ ಗೊತ್ತು. ಹಾಗೆಯೇ ಹೋದ ವರ್ಷ ಸೆಪ್ಟೆಂಬರ ತಿಂಗಳಲ್ಲಿಯೂ ಮದ್ರಾಸ್ ಕೇಂದ್ರವನ್ನಾಗಿ ಮಾಡಿ ಎರಡನೇ ಪ್ರಯತ್ನವೂ ನಡೆಯಿತು. ಅದೂ ಫಲಕಾರಿಯಾಗದಾದಾಗ, ಸೆಪ್ಟೆಂಬರ ತಿಂಗಳಲ್ಲಿ ಪ್ರಾರಂಭವಾದ "ಹೆಗಡೆ ಹಟಾವೊ" ಕಾರ್ಯಕ್ರಮ 1984 ಜನೇವರಿಯಲ್ಲಿ ವಿಧಾನ ಸಭೆ ಅಧಿವೇಶನ ಸೇರುವವರೆಗೂ ನಡೆದು, ಮಹಾರಾಷ್ಟ್ರದ ಮುಖ್ಯ ಮಂತ್ರಿ ವಸಂತ ದಾದಾ ಪಾಟೀಲರ ಪತ್ನಿ ಲೋಕ ಸಭೆ, ಸದಸ್ಯೆ ಶಾಲಿನೀ ತಾಯಿಯವರ ಮಧ್ಯ ಪ್ರವೇಶ, ಬೆಂಗಳೂರು ಅಶೋಕ ಹೋಟೆಲ್ ಪ್ರಕರಣ "ಮೊಯಿಲಿ ಟೇಪ್" ಪ್ರಕರಣಗಳೊಂದಿಗೆ ತಾತ್ಪೂರ್ತಿಕವಾಗಿ ಕತ್ತಲೆ ಕೋಣೆ ಸೇರಿದೆ ಎಂಬ ಅಭಿಪ್ರಾಯ ಜನರ ಮನಸ್ಸಿನಲ್ಲಿ ಮೂಡಿ ಬಂದಿತ್ತು. ಆದರೆ ದಿಲ್ಲಿಯಿಂದ ಕಾಂಗ್ರೆ ಪ್ರಧಾನ ಕಾರ್ಯದರ್ಶಿಯವರು ಬಿಡುಗಡೆ ಮಾಡಿದ ದಸ್ತಾವೇಜು, ಕರ್ನಾಟಕದ ಜನತೆಯ ಭಾವನೆಯನ್ನು ಸುಳ್ಳಾಗಿಸಿದೆ.

ತಾನು ಕರ್ನಾಟಕದ ಮುಖ್ಯ ಮಂತ್ರಿಯಾದ ಕೂಡಲೇ ಕಾಂಗ್ರೆ ಏತರ ಮುಖ್ಯ ಮಂತ್ರಿಗಳ ಸಭೆ ಕರೆದು, ಕೇಂದ್ರ ರಾಜ್ಯ ಸಂಬಂಧದ ಕುರಿತು ವಿಚಾರ ವಿನಿಮಯ ಮಾಡಿ ರಾಜ್ಯಗಳಿಗೆ ಕೇಂದ್ರದಿಂದಾಗುತ್ತಿರುವ ಅನ್ಯಾಯದ ಕುರಿತು ಏಕಭಿಪ್ರಾಯ ಉಂಟುಮಾಡಿ, ಕೇಂದ್ರ ರಾಜ್ಯ ಸಂಬಂಧದ ಕುರಿತು ಇಂದಿರಾ ಸರಕಾರ ಸರ್ಕಾರಿಯಾ ಕಮಿಟಿ ನೇಮಿಸುವಂತೆ ಮಾಡಿರುವುದು, ಆ ಪ್ರಯತ್ನ ಮುಂದುವರಿಸಿ ಹೈದರಾಬಾದ, ದಿಲ್ಲಿ, ಕಾಶ್ಮಿರ, ಕಲ್ಕತ್ತಾ, ಗಳಲ್ಲಿ 5 ಕಾಂಗ್ರೆ ಯೇತರ ಮುಖ್ಯ ಮಂತ್ರಿಗಳ ಮತ್ತು 17 ರಾಜಕೀಯ ಪಕ್ಷಗಳ ಸಮಾವೇಶ ಸೇರುವಂತೆಯೂ, ಕೇಂದ್ರ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ಮೂರು ಹಂತದ ಚಳುವಳಿಯ ಕಾರ್ಯಕ್ರಮ ನಿರ್ಧರಿಸಿ ದೇಶಾದ್ಯಂತ ಜನ ಜಾಗೃತಿಗೆ ಕಾರಣೀಭೂತರಾಗಿರುವ ಹೆಗಡೆಯವರನ್ನು ಅಧಿಕಾರ ಸ್ಥಾನದಿಂದ ಉರುಳಿಸುವ ತೀವ್ರ ಪ್ರಯತ್ನ ಇಂದಿಗೂ ನಡೆದಿರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಇಂದಿರಾ ಕಾಂಗ್ರೆಸ್ಸೆ ಪಕ್ಷದ ಈ ಪ್ರಯತ್ನ ಸಂವಿಧಾನಕ್ಕೆ ವಿರುದ್ಧವಾಗಿದೆ, ನಾಚಿಕೆಗೇಡಿತನದ್ದಾಗಿದೆಂದು ಮಾತ್ರ ಸ್ಪಷ್ಟ ಹೇಳಬೇಕಾಗುತ್ತದೆ. ಕಾಂಗ್ರೆ ಮುಖಂಡರ ಈ ಪ್ರಯತ್ನಕ್ಕೆ ನೀರುಕುಡಿಸಲು ಕಲ್ಕತ್ತದ ವಿರೋಧ ಪಕ್ಷಗಳ ಸಮಾವೇಶ ನಿರ್ಧರಿಸಿದೆ. ಕಾಂಗ್ರೆಯೇತರ ಯಾವದೇ ಸರಕಾರವನ್ನು ಉರುಳಿಸಲು ನಡೆಸುವ ಪ್ರಯತ್ನವನ್ನು ಎಲ್ಲ ವಿರೋಧ ಪಕ್ಷಗಳೂ ಒಂದಾಗಿಯೇ ಎದುರಿಸಿ ಅಂಥ ಕುತಂತ್ರವನ್ನು ವಿಫಲಗೊಳಿಸಲು ಎಲ್ಲಾ ಶಕ್ತಿಯನ್ನು ಕ್ರೋಢೀಕರಿಸಿ ಭೀಮಬಲಯುತ್ನ ಮಾಡುತ್ತೇವೆಂಬ ಪ್ರತಿಜ್ಞೆ ಕೈಗೊಳ್ಳಲಾಗಿದೆಂಬ ಸಂಗತಿಯನ್ನು ಮೊನ್ನೆ

(8ನೇ ಪುಟ ನೋಡಿ)

—"ಎನ್ಕೆ"

ಭಾರತ ದರ್ಶನ

ರಾಷ್ಟ್ರಪತಿ ಭಾಷಣ ಪರಿಹಾರ ಒಳಗೊಂಡಿಲ್ಲ

ರಾಷ್ಟ್ರಪತಿ ಜೈಲ್ ಸಿಂಗ್ ಅವರು ಸಂಸತ್ತಿನ ಜಂಟೀ ಅಧಿವೇಶನದಲ್ಲಿ ಭಾಷಣ ಮಾಡುತ್ತ ದೇಶದ ಹಲವಾರು ರಂಗಗಳಲ್ಲಿಯ ಪ್ರಗತಿಯನ್ನು ನಮೂದಿಸಿ ಪಂಜಾಬ್ ಮತ್ತು ಹರ್‍ಯಾಣದಲ್ಲಿ ದಿನನಿತ್ಯ ನಡೆಯುತ್ತಿರುವ ಹತ್ಯಾಕಾಂಡ, ಗಲಭೆ, ಕೋಮು ಹಾಗೂ ರಾಷ್ಟ್ರವಿರೋಧಿ ಶಕ್ತಿಗಳ ಚಟುವಟಿಕೆಗಳ ಕುರಿತು ವ್ಯಥೆ ಮತ್ತು ಆತಂಕ ವ್ಯಕ್ತಪಡಿಸಿದರು. ಪಂಜಾಬ್ ವಿಭಜನೆಯಾದಾಗ 1970 ರಲ್ಲಿ ಎರಡೂ ರಾಜ್ಯಗಳ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವತಃ ಇಂದಿರಾಗಾಂಧಿಯವರೇ ಮುಂದೆ ಮಾಡಿದ್ದ ಸಲಹೆಗಳನ್ನು ಕೇಂದ್ರ ಸರಕಾರ ಇಷ್ಟು ವರ್ಷಗಳಾದರೂ ಯಾಕೆ ಅನುಷ್ಠಾನಕ್ಕೆ ತರಲಿಲ್ಲ, 1981 ರಿಂದಲೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಈ ಎರಡೂ ರಾಜ್ಯಗಳ ಹಾಗೆಯೇ ಸಿಖ್ ಜನಾಂಗದ ಸಮಸ್ಯೆಗಳ ಪರಿಹಾರಕ್ಕೆ ಹಲವಾರು ಸೂಚನೆಗಳನ್ನು ಮಂಡಿಸುತ್ತ ಬಂದರೂ, ಇತರ ವಿರೋಧ ಪಕ್ಷದವರೂ ಸಿಪಿಐ(ಎಂ) ನಿಲುವಿಗೆ ಬೆಂಬಲ ನೀಡಿದ್ದರೂ ಕೂಡ ಈ ಗಂಭೀರ ಸಮಸ್ಯೆಗೆ ಪರಿಹಾರ ಒದಗಿಸಲು ಯಾಕೆ ಮುಂದೆ ಬಂದಿಲ್ಲವೆಂಬುದನ್ನು ಸ್ಪಷ್ಟಪಡಿಸಿಲ್ಲ. ಈಗ ಸಿಖ್ ಮತ್ತು ಹಿಂದೂ ಜಾತೀವಾದಿಗಳೆಲ್ಲ ಧಾರ್ಮಿಕ, ಮತೀಯ ದ್ವೇಷವನ್ನು ಹರಡಿ ನರಹತ್ಯೆ ಮಾಡುತ್ತಿರುವಾಗ ಹರಿಯಾಣ-ಪಂಜಾಬಗಳಲ್ಲಿ ಶಾಂತಿ ನೆಲೆಸುವಂತೆಯೂ ಹಿಂದೂ ಸಿಖ್‌ರಲ್ಲಿ ಸೌಹಾರ್ದತೆಯುನ್ನುಂಟು ಮಾಡಲು, ಜಾತಿವಾದಿಗಳನ್ನೂ ಪ್ರತ್ಯೇಕತಾವಾದಿಗಳನ್ನೂ ಹತ್ತಿಕ್ಕಲು ಸರಕಾರ ಯಾವ ಕಠೋರ ನಿಲುವೆಯನ್ನನು ಸರಿಸುತ್ತಿದೆಂದು ಹೇಳಿಲ್ಲ.

ತಮ್ಮ ಸುದೀರ್ಘ ಭಾಷಣದಲ್ಲಿ ದಿನನಿತ್ಯ ಸಾವಿರಾರು ನಿರಪರಾಧಿಗಳ ಹತ್ಯಾಕಾಂಡ ನಡೆಯುತ್ತಿರುವ ಪಂಜಾಬ್ ಸಮಸ್ಯೆಗೆ ಅತ್ಯಲ್ಪ ಭಾಗವನ್ನಷ್ಟೇ ಮೀಸಲಾಗಿಟ್ಟಿರುವುದನ್ನು ನೋಡುವಾಗ ರಾಷ್ಟ್ರಾಧ್ಯಕ್ಷರಿಗೆ ಪಂಜಾಬ್ ಹರಿಯಾಣಗಳಲ್ಲಿ ನಡೆಯುತ್ತಿರುವ ದೊಂಬಿ, ಕೊಲೆಗಳ ಕುರಿತು ಎಷ್ಟು ಕಾಳಜಿ ಇದೆಂಬುದು ಗೊತ್ತಾಗುತ್ತದೆ. ರಾಷ್ಟ್ರಾಧ್ಯಕ್ಷರ ಈ ವಿಚಾರ ಇಡೀ ರಾಷ್ಟ್ರಕ್ಕೆ ಘಾತುಕ, ಶಾಂತಿಪ್ರಿಯರಿಗೆ ಅಪಮಾನಕಾರಕವೆಂದೇ ಹೇಳಬೇಕು. ಹರಿಯಾಣ ರಾಜಧಾನಿ ನಿರ್ಮಿಸಲು ಪಂಜಾಬ್ ಸರಕಾರ ಧನಸಹಾಯ ಮಾಡಬೇಕು, ಗಡಿ ಸಮಸ್ಯೆ ಚರ್ಚಿಸಿ ಬಗೆಹರಿಸಬೇಕು, ನದಿ ನೀರಿನ ಹಂಚಿಕೆ ಪರಿಹಾರಕ್ಕೆ ಸಂವಿಧಾನದಲ್ಲಿ ಹೇಳಿರುವಂತೆ ನೀರಿನ ಹಂಚಿಕೆ ಕಮಿಶನ್‌ಗೆ ಒಪ್ಪಿಸ ಬೇಕೆಂದು ಸಿಪಿಐ (ಎಂ) ಹಾಗೆಯೇ ಇತರ ವಿರೋಧ ಪಕ್ಷಗಳೆಲ್ಲ ಸೂಚಿಸಿರುವಾಗ, ಸಿಖ್ಖರೂ ಹೆಚ್ಚಿನಂಶ ಇದಕ್ಕೆ ಒಪ್ಪಿಕೊಂಡಿರುವಾಗ 1970 ರಲ್ಲಿ ಇಂದಿರಾ ಮಾಡಿದ ಸೂಚನೆಯೂ ಇದೇ ಆಗಿರುವಾಗ ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಅಂಶ ನಮೂದಿಸಿಲ್ಲ. ಯಾಕೆ ?

ಬುದ್ಧಿವಂತಿಕೆಯ ರೇಲ್ವೆ ಬಜೆಟ್

ಮುಂಬರುವ ಲೋಕ ಸಭೆ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡೆ ರೇಲ್ವೆ ಮಂತ್ರಿ ಘನಿಖಾನ್ ಚೌಧರಿಯವರು ಪ್ರಯಾಣಿಕರ ಕಿಸೆಯಿಂದ ನೇರವಾಗಿ ಹಣ ದೋಚಿ ಕೊಳ್ಳದೆ "ಅಳಿಯ ಅಲ್ಲ ಮಗಳ ಗಂಡ" ಎಂಬ ಗಾದೆಯಂತೆ ಅಪ್ರತ್ಯಕ್ಷ ರೀತಿಯಿಂದ ಕಿಸೆ ಖಾಲಿ ಮಾಡ ಹೊರಟಿದ್ದಾರೆ. ಅಷ್ಟೇ ಅಲ್ಲ 'ಹಣವಿಲ್ಲ" ಎಂಬ ನೆವ ಮುಂದೆ ಮಾಡಿ ಅಭಿವೃದ್ಧಿ ಕೆಲಸಗಳನ್ನೆಲ್ಲ ಕೈ ಬಿಟ್ಟಿದ್ದಾರೆ.

ಪ್ರಯಾಣಿಕರನ್ನು ಸುಲಿಯುವ ಹೊಸ ವಿಧಾನವನ್ನು ಅನುಸರಿಸುತ್ತಿದ್ದಾರೆ ರೇಲ್ವೆ ಮಂತ್ರಿಯವರು. ಪ್ಲಾಟ್ ಫಾರಂ ಪ್ರವೇಶವನ್ನು 50 ಪೈಸೆಯಿಂದ ಒಂದು ರೂ. ಹೆಚ್ಚಿಸಿದಾರೆ. ಹೋದ ವರ್ಷ ಅನುಷ್ಠಾನದಲ್ಲಿ ತಂದ ಅಂಚಿನ ಹೊಂದಾಣಿಕೆ ಅಂದರೆ ರೂ 4.70 ಇದ್ದರೆ ಅದನ್ನು ರೂ 5 ರಷ್ಟು ಮಾಡಿ ಅಪಾರ ಲಾಭಗಳಿಸಿದ ಮಂತ್ರಿವರ್ಯರು ಹಣ ಗಳಿಕೆಯ ಅದೇ ಸುಲಭದಾರಿಯನ್ನು ಹಿಡಿದಿದ್ದಾರೆ ಈ ವರ್ಷ ಕೂಡ. ಹಾಗೆಯೇ ಮೇಲ್ ಮತ್ತು ಎಕ್ಸ್‌ಪ್ರೆಸ್ ಗಾಡಿಗಳಲ್ಲಿಯ ಪ್ರಯಾಣದ ಮೇಲೆ ಸರ್ ಚಾರ್ಜ್ ಹೇರಿದ್ದಾರೆ. ಇಷ್ಟೆಲ್ಲಾದರೂ ಕೂಡ ರೂ. 114 ಕೋಟಿ ಆದಾಯದ ಜೊತೆಯಲ್ಲಿ ರೂ. 70 ಕೋಟಿ ಕೊರತೆ ತೋರಿಸಿದ್ದಾರೆ.

ರೇಲ್ವೆ ಮಂತ್ರಿಯವರು ಹಿಂದಿನ ಕರ್ನಾಟಕದ ರೈಲ್ವೆ ಮಂತ್ರಿಗಳ ಹಾದಿಯನ್ನೇ ತುಳಿದು ಕರ್ನಾಟಕವನ್ನು ಪೂರ್ಣ ಕಡೆಗಣಿಸಿದ್ದಾರೆ. ನಾಲ್ಕು ಕೋಟಿ ಕನ್ನಡಿಗರ ಹಲವಾರು ವರ್ಷಗಳ ಬೇಡಿಕೆಯಾದ ಮಿರಜ್-ಬೆಂಗಳೂರು, ಮೈಸೂರು-ಬೆಂಗಳೂರು ಬ್ರಾಡ್‌ಗೇಜ ಪರಿವರ್ತನೆ ಹುಬ್ಬಳ್ಳಿ-ಕಾರವಾರ, ಸೋಲಾಪುರ-ಹುಬ್ಬಳ್ಳಿ, ಲೋಂಡಾ-ಹೊಸಪೇಟೆ, ಚಾಮರಾಜನಗರ ಸತ್ಯಮಂಗಲಗಳಂಥ ಹೊಸ ರೈಲ್ವೆ ಮಾರ್ಗಗಳು ಈ ಬಜೆಟ್‌ನಲ್ಲಿ ಕಂಡು ಬಾರದಿರುವುದು ಕರ್ನಾಟಕಕ್ಕೆ ಮಾಡಿರುವ ಅನ್ಯಾಯ. ಕನ್ನಡಿಗರೇ ಆದ ಜಾಫರ್‌ಶರೀಫರು (ಕೇಂದ್ರದ ರೇಲ್ವೆ ಖಾತೆಯ ರಾಜ್ಯ ಮಂತ್ರಿ) ಬಾಯಿ ಬಿಡುವುದಕ್ಕೆ ಅಂಜಿದ್ದಾರೆಯೇ ಹೇಗೆ ? ಹೆಗಡೆ ಸರಕಾರವನ್ನು ಉರುಳಿಸುವುದರಲ್ಲಿ ನಿರತರಾದ ಈ ಮಹಾಶಯರಿಗೆಲ್ಲ ಕರ್ನಾಟಕದ ಜನರ ಬೇಡಿಕೆಗಳ ಕೂಗು ಕೇಳಿಸುತ್ತಿಲ್ಲವೇ, ? ಬ್ರಾಡ್‌ಗೇಜ್ ರೇಲ್ವೆಗಳಿಲ್ಲದೆ, ಪ್ರಯಾಣಿಕರೂ, ಉದ್ಯಮಿಗಳೂ, ವ್ಯಾಪಾರಸ್ಥರೂ ವಿನಾಕಾರಣ ತೊಂದರೆಗೊಳಗಾಗುವುದು ಇವರಿಗೆ ತಿಳಿದಿಲ್ಲವೇ ? ಅಥವಾ ಕರ್ನಾಟಕದ 28 ಲೋಕ ಸಭೆ ಸದಸ್ಯರಿಗೆ ನಮ್ಮ ರಾಜ್ಯದಲ್ಲಿ ರೇಲ್ವೆ ಅಭಿವೃದ್ಧಿಯ ಕಾರ್ಯಕ್ರಮವೇ ತಿಳಿದಿಲ್ಲವೇ ? ಕೈಗೆ ಮತ ಖಾತರಿ ಎಂದು ತಿಳಿದಿರುವ ಕಾಂಗ್ರೆಸಿಗರಿಗೆ ಜನರ ಕೂಗು ಕೇಳಿಸಿಕೊಳ್ಳುವ ಅಗತ್ಯವೇನಿದೆ ? ಹೌದೋ ಅಲ್ಲವೋ, ನೀವೇ ಹೇಳಿ.

ಅಂತುಳೆ ವಸಂತದಾದ ಕುಸ್ತಿ

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಬ್ದುಲ್ ರೆಹಮಾನ ಅಂತುಳೆಯವರು ಕರ್ನಾಟಕದ ವೀರಪ್ಪ ಮೊಯಿಲಿ, ಎ. ಕೆ. ಸುಬ್ಬಯ್ಯನವರಂತೆ ಯಾವಾಗಲೂ ಸುದ್ದಿಯಲ್ಲೇ ಇರುತ್ತಾರೆ. ಸಿಮೇಂಟ್ ಹಗರಣ, ಅಧಿಕಾರದ ದುರುಪಯೋಗ ಹಣ ಸಂಗ್ರಹದಲ್ಲಿ ಮೊದಲಾದ ಆರೋಪಗಳಿಗೊಳಗಾಗಿ ತಮ್ಮ ಪಕ್ಷದೊಳಗಿನ ಹಾಗೆಯೇ ಸಾರ್ವಜನಿಕರ ಪ್ರತಿರೋಧವನ್ನೆದುರಿಸಲಾರದೆ ಕೊನೆಗೆ ರಾಜೀನಾಮೆ ಕೊಡಬೇಕಾಯಿತು. ಕೆಳಗಿನ ಕೋರ್ಟು ಅಂತುಳೆಯವರ ಪರ ನಿರ್ಣಯ ವಿತ್ತಾಗ ಸುಪ್ರಿಂ ಕೋರ್ಟ್ ಅಂತುಳೆ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಸ್ವೀಕರಿಸಿ ಭ್ರಷ್ಟಾಚಾರದ ಆರೋಪದ ವಿಚಾರಣೆಯನ್ನು ಮುಂದುವರಿಸಬೇಕೆಂದು ಮುಂಬಯಿ ಹೈಕೋರ್ಟಿಗೆ ಆದೇಶ ನೀಡಿದೆ. ಎಲ್ಲ ನೀತಿ ನಿಯಮಗಳನ್ನೂ ಕಾಯಿದೆ ಕಾನೂನುಗಳನ್ನೂ ಗಟಾರಕ್ಕೊಗೆದು ತಮ್ಮ ಅಧಿಕಾರ ರಕ್ಷಣೆಯೇ ಜೀವನದ ಗುರಿ ಎಂದು ಪರಿಗಣಿಸಿರುವ ಕಾಂಗ್ರೆಸ್ ಮುಖಂಡ ಸುಪ್ರಿಮ್ ಕೋರ್ಟ್ ಅಂತುಳೆ ಕಟ್ಲೆಯ ವಿಷಯದಲ್ಲಿ ನೀಡಿದ ಸುಪ್ರಿಂ ಕೋರ್ಟಿನ ನಿರ್ಣಯದಿಂದ ಪಾರಾಗಲು ಇಂದಿರಾ ಗಾಂಧಿಯವರ ಮೊರೆ ಹೊಕ್ಕಿದ್ದಾರೆ. ಅಂತುಳೆಯವರು ಏನು ಮಾಡಿದರೂ ಕೂಡ ಆತ ತನ್ನವ ಎಂಬ ಆತ್ಮಿಯತೆಯ ನಿಲುವು ತಾಳಿರುವ ಇಂದಿರಾ ಗಾಂಧಿಯವರು ಅವರ ರಕ್ಷಣೆಗೆ ಸಂವಿಧಾನ ಬದಲಾಯಿಸಲೂ, ಕಾಯಿದೆ ತಿದ್ದುಪಡಿ ಮಾಡಲೂ ತಯಾರಿರುವಂತೆ ಕಂಡು ಬರುತ್ತದೆ. 1947 ರಲ್ಲಿ ಪಾಸಾದ ಭ್ರಷ್ಟಾಚಾರ ತಡೆ ಹಿಡಿಯುವ ಕಾನೂನಿನಂತೆ ಸಾರವಾಗಿಯೇ ಮುಖ್ಯಮಂತ್ರಿಯವರೂ ಕೂಡ ಆರೋಪಿಯಾಗುತ್ತಾರೆ. ಅವರ ಮೇಲೆ ದಾವೆ ಹೂಡಲು ಶಾಸನ ಸಭೆಯ ಒಪ್ಪಿಗೆ ಪಡೆಯುವ ಅಗತ್ಯವಿಲ್ಲೆಂದು ಸುಪ್ರೀಂ ಕೋರ್ಟ್ ನಿರ್ಣಯಕ್ಕೆ ಬಂದಿರುವುದರಿಂದ ಅಂತುಳೆ ಗುಂಪಿನಲ್ಲಿ ಗೊಂದಲ ಉಂಟಾಗಿದೆ ಹೋದ ವರ್ಷ ಅಕ್ಟೋಬರ್ ತಿಂಗಳಲ್ಲಿಯೇ ಇಂದಿರಾ ಗಾಂಧಿಯವರು ಭ್ರಷ್ಟಾಚಾರ ತಡೆ ಹಿಡಿಯುವ ಕಾನೂನಿಗೆ ತಿದ್ದುಪಡಿ ಸೂಚಿಸಿ ಅಂತುಳೆಯವರನ್ನು ರಕ್ಷಿಸಬೇಕೆಂದು ವಸಂತ ದಾದಾ ಪಾಟೀಲರಿಗೆ ಆದೇಶ ನೀಡಿದ್ದರಂತೆ. ಆದರೆ ಮಹಾರಾಷ್ಟ್ರದ ಕಾಂಗ್ರೆಸ್ಸಿನೊಳಗೆ ಅಧಿಕಾರಕ್ಕಾಗಿ ತೀವ್ರ ಕಚ್ಚಾಟ ನಡೆಯುತ್ತಿರುವಾಗ ಅಂತುಳೆ ರಕ್ಷಣೆಗೆ ದಾದಾ ಮುಂದಾಗಲು ಸಾಧ್ಯವೇ ಇಲ್ಲ ಆದ ಕಾರಣ ಅಂತುಳೆ ಬೆಂಬಲಿಗರೆಲ್ಲ ದಾದಾನ ವಿರುದ್ಧ ಬಂಡಾಯ ಮಾಡಿದ್ದಾರೆ. ಮನವಿಗಳ ಸರಮಾಲೆ ಇಂದಿರಾ ದೇವಿಯ ಕೊರಳನ್ನ ತುಂಬಿದೆ ಮುಖ್ಯ ಮಂತ್ರಿಯವರೂ ಭ್ರಷ್ಟಾಚಾರದ ಆರೋಪಕ್ಕೊಳಗಾದರೆ ಲೋಕಾಯುಕ್ತವನ್ನೆದುರಿಸಬೇಕಾಗುತ್ತದೆಂಬ ಕಾನೂನನ್ನು ಹೆಗಡೆ ಸರಕಾರ ಪಾಸು ಮಾಡಿರುವಾಗ ಅಂತುಳೆಯವರ ರಕ್ಷಣೆಗಾಗಿ ಭ್ರಷ್ಟಾಚಾರದ ಕಾನೂನು ಬದಲಾವಣೆಯಾದರೆ ಅದು ಮತದಾರರಿಗೆ ಮೋಸ ಮಾಡಿದಂತೆಯೇ ಸರಿ.

ಮಹಿಳಾ ಕಾರ್ಮಿಕರ ಬಿಡುಗಡೆಗೆ ಒತ್ತಾಯ

ಬೆಂಗಳೂರು ವರ್ತೂರು ಹೋಬಳಿ ಸೇರಿದ ಸಿದ್ಧಾಪುರದಲ್ಲಿರುವ ರುಕ್ಮಿಣಿ ಅರೋಮೇಟಿಕ್ಸ್ ಊದು ಬತ್ತಿ ಕಂಪೆನಿಯಲ್ಲಿ ಸುಮಾರು 120 ಕ್ಕೂ ಹೆಚ್ಚಿನ ಮಹಿಳಾ ಕಾರ್ಮಿಕರು ಅಸಂಘಟಿತರಾಗಿದ್ದು, ತಮ್ಮ ಕನಿಷ್ಟ ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಿ ಸಂಘವನ್ನು ರಚಿಸಿಕೊಂಡ ಕಾರಣದಿಂದ ಮಾಲೀಕರು ಯಾವ ನೋಟೀಸನ್ನು ಕೊಡದೆ 92 ಮಹಿಳಾ ಕಾರ್ಮಿಕರಿಗೆ ಕೆಲಸದ ನಿರಾಕರಣೆ ಮಾಡಿ ಇನ್ನುಳಿದ 23 ಕಾರ್ಮಿಕರಿಗೆ ಕಾನೂನು ಬಾಹಿರ ಲೇ ಆಫ್ ಘೋಷಿಸಿರುತ್ತಾರೆ. ಕಳೆದ ಮೂರು ತಿಂಗಳಿಂದ ಕಾರ್ಮಿಕರು ಹೋರಾಟದಲ್ಲಿದ್ದಾರೆ.

ಈ ಕಾರ್ಮಿಕರು ಬೇರೆ ವಿಭಾಗದ ಕಾರ್ಮಿಕರ ಬೆಂಬಲ ಪಡೆದು ತಮ್ಮ ನ್ಯಾಯಕ್ಕಾಗಿ ದೀರ್ಘ ಕಾಲದ ಹೋರಾಟ ನಡೆಸಿಕೊಂಡು ಬರುತ್ತಿರುವುದು ಮಾಲೀಕರಿಗೆ ಸಹಿಸದೆ ಇವರುಗಳ ಮೇಲೆ ರೌಡಿಗಳನ್ನು ಬಿಟ್ಟು ಮಹಿಳಾ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಿದ್ದಾರೆ.

ತಾ॥ 23 - 2 - 84 ರಂದು ಮಾಲೀಕರು ಈ ಕಾರ್ಮಿಕರ ಮೇಲೆ ಸುಳ್ಳು ಆರೋಪಣೆಗಳನ್ನು ಮಾಡಿ ಪೋಲೀಸರಿಗೆ ದೂರು ಇತ್ತ ಕಾರಣದಿಂದ 13 ಮಹಿಳಾ ಕಾರ್ಮಿಕರನ್ನು ಬಂಧಿಸಿ ಸುಳ್ಳು ಕೇಸುಗಳನ್ನು ದಾಖಲು ಮಾಡಿ ಜ್ಯುಡಿಷಿಯಲ್ ಕಸ್ಟಡಿಗೆ ಒಳಪಡಿಸಿದ್ದಾರೆ.

ಮಾಲೀಕರು ನಡೆಸಿರುವ ಅಮಾನುಷ ದೌರ್ಜನ್ಯದ ಬಗ್ಗೆ ಮತ್ತು ಸುಳ್ಳು ಆರೋಪಣೆಗಳ ಬಗ್ಗೆ ಖಂಡಿಸಿ ಬಂಧಿತರಾಗಿರುವವರನ್ನು ಕೂಡಲೇ ಬಿಡುಗಡೆಗೆ ಒತ್ತಾಯಿಸಿ ಸರಕಾರ ಈ ವಿವಾದದಲ್ಲಿ ಮಧ್ಯ ಪ್ರವೇಶ ಮಾಡಿ ಬಗೆಹರಿಸಬೇಕೆಂದು ಸಿ. ಐ. ಟಿ. ಯು. ಒತ್ತಾಯಿಸುತ್ತದೆ.

ಎಸ್. ಎಫ್. ಐ. ಕಾಲೇಜು ಸಮಿತಿಗಳ ರಚನೆ

ದಿನಾಂಕ 8-7-84 ರಂದು ಸೆಂಟ್ರಲ್ ಜೂನಿಯರ್ ಕಾಲೇಜಿನಲ್ಲಿ 15 ಜನರ ಸಭೆ ಸೇರಿದ್ದು ಸಂಚಾಲಕರಾಗಿ ಕಾ॥ ಚಂದ್ರಶೇಖರ್ ಸಹ ಸಂಚಾಲಕರಾಗಿ ಬಿ. ಎಸ್. ಮೋಹನ್ ರವರು ಆಯ್ಕೆಯಾದರು ಈ ಸಭೆಯಲ್ಲಿ ಎಸ್. ಎಫ್. ಐ.ನ ಕುರಿತು ಹೇಳಲಾಯಿತು.

ದಿನಾಂಕ 14-2-84 ರಂದು ಸರಕಾರಿ ವಿಜ್ಞಾನ ಕಾಲೇಜಿನಲ್ಲಿ 15 ಜನರ ಒಂದು ಸಭೆ ಸೇರಿದ್ದು. ಅಧ್ಯಕ್ಷರಾಗಿ ನಾಗರಾಜು ಉಪಾಧ್ಯಕ್ಷರಾಗಿ ಗುರುಮೂರ್ತಿ ಕಾರ್ಯದರ್ಶಿಯಾಗಿ ರಾಜೇಂದ್ರಕುಮಾರ್ ಸಹ ಕಾರ್ಯದರ್ಶಿಯಾಗಿ ವೆಂಕಟೇಶ ರವರು ಆಯ್ಕೆಯಾದರು.

ದಿನಾಂಕ 14-2-84 ರಂದು ಸರ್ಕಾರಿ ಮಹಾರಾಣಿ ಕಾಲೇಜಿನಲ್ಲಿ ಸಭೆನಡೆದು ಅಧ್ಯಕ್ಷರಾಗಿ ನೈಲಾಮಳಿಮಠ್ ಕಾರ್ಯದರ್ಶಿಯಾಗಿ ತೇಜಸಿನಿ ಆಯ್ಕೆಯಾದರು.

ದಿನಾಂಕ 14-2-84 ರಂದು ವಿವೇಕಾನಂದ ಕಾಲೇಜಿನ ಸಭೆ ಸೇರಿದ್ದು 25 ಜನರು ಭಾಗವಹಿಸಿದ್ದರು. ಸಂಚಾಲಕರಾಗಿ ಅರವಿಂದ ಸಹ ಸಂಚಾಲಕರಾಗಿ ಬಸವರಾಜ್, ರಮೇಶ್‌ಕುಮಾರ್ ಸಿಂಗ್ ಬಾಲಸುಬ್ರಮಣ್ಯಂ, ರವರು ಆಯ್ಕೆಯಾದರು.

15-2-84 ರಂದು ಇದೇ ಕಾಲೇಜಿನ ವಿದ್ಯಾರ್ಥಿನಿಯರ ಉಪಸಮಿತಿಯನು ರಚಿಸಲಾಯಿತು ಸಂಚಾಲಕಿಯಾಗಿ ಲೀಲಾರವರು ಸಹ ಸಂಚಾಲಕಿಯರಾಗಿ ಜಯಮ್ಮ ಮತ್ತು ಗೌರಮ್ಮರವರು ಆಯ್ಕೆಯಾದರು.

ದಿನಾಂಕ 8-2-84 ರಂದು ಸರ್ಕಾರಿ ಕಲಾಕಾಲೇಜಿನಲ್ಲಿ ಸಭೆ ಸೇರಿ ಸಂಚಾಲಕರಾಗಿ ರಾಮಚಂದ್ರರವರು ಸಹ ಸಂಚಾಲಕರಾಗಿ ಮುನೀಂದ್ರಬಾಬುರವರು ಆಯ್ಕೆಯಾದರು.

ದಿನಾಂಕ 15 2-84 ರಂದು ಬಿ. ಎನ್. ಎಂ. ಕಾಲೇಜಿನಲ್ಲಿ ಸಭೆ ಸೇರಿ 15 ಜನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಸಂಚಾಲಕಿಯಾಗಿ ಶಾಂತಾಕುಮಾರಿ ಸಹ ಸಂಚಾಲಕಿಯಾಗಿ ರಮಾಮಣಿ, ಉಷಾರಾಣಿಯವರು ಆಯ್ಕೆಯಾದರು.

ದಿನಾಂಕ 11ನೇ ತಾರೀಖು ಸರ್ಕಾರಿ ಸಂಜೆ ಕಾಲೇಜಿನ ವಿದ್ಯಾರ್ಥಿಗಳ ಸಭೆ ಸೇರಿ ಸಂಚಾಲಕರಾಗಿ ವೈಲಾರಿಯವರು ಸಹ ಸಂಚಾಲಕರಾಗಿ ರಾಘವೇಂದ್ರ ಆಯ್ಕೆಯಾದರು.

ಮೇಲ್ಕಂಡ ಸಭೆಗಳಲ್ಲಿ ನಗರ ಸಮಿತಿಯ ಪರವಾಗಿ ಶ್ರೀಧರ್ ಮೂರ್ತಿ ರಾಜೇಂದ್ರಕುಮಾರ್, ತೇಜಸ್ವಿನಿ. ಲೀಲಾ ಮತ್ತು ಜಿಲ್ಲಾ ಸಮಿತಿಯಿಂದ ಡಿ. ಶಿವಶಂಕರ್ ಭಾಗವಹಿಸಿದ್ದರು.

ಕರ್ನಾಟಕದಲ್ಲಿ ಯಶಸ್ವಿ ಸಮಾವೇಶ

ಒಗ್ಗಟ್ಟಿನಿಂದ ಜನಪರ ಆಂದೋಲನ ನಡೆಸಲು ನಿರ್ಧಾರ

ಜನಸಾಮಾನ್ಯರನ್ನು ಹಣ್ಣುಗಾಯಿ ಮಾಡುತ್ತಿರುವ ನಿರುದ್ಯೋಗ, ಬೆಲೆಯೇರಿಕೆ, ಕೇಂದ್ರದ ಕಾಂಗ್ರೆಸ್ (ಐ)ನ ದುರಾಡಳಿತ ಹಾಗೂ ಕಾಂಗ್ರೆಸೇತರ ಸರ್ಕಾರಗಳ ವಿರುದ್ಧ ಅದು ನಡೆಸುತ್ತಿರುವ ಕುತಂತ್ರಗಳ ವಿರುದ್ಧ ದೇಶಾದ್ಯಂತ ಫೆಬ್ರವರಿ 13 ರಂದು ಆರಂಭವಾದ ವ್ಯಾಪಕ ಆಂದೋಲನದ ಎರಡನೆಯ ಹಂತವಾಗಿ ರಾಜ್ಯಮಟ್ಟದ ಸಮಾವೇಶಗಳು. ಕರ್ನಾಟಕದಲ್ಲಿ ಇದು ಫೆಬ್ರವರಿ 25 ರಂದು ಯಶಸ್ವಿಯಾಗಿ ನೆರವೇರಿತು. ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿಯನಿಯರ್‍ಸ್‌ನ ಸಭಾಂಗಣದಲ್ಲಿ ಆ ದಿನ ಮಧ್ಯಾಹ್ನದ ನಂತರ ನಡೆದ ಸಮಾವೇಶದಲ್ಲಿ ಕಲಕತ್ತೆಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷಗಳ ರಾಷ್ಟ್ರೀಯ ನಾಯಕರು, ರಾಜ್ಯದ ಮುಂದಾಳುಗಳು ಈ ಆಂದೋಲನದ ಹಿನ್ನಲೆಯ ಬಗ್ಗೆ, ಅದನ್ನು ಯಶಸ್ವಿಯಾಗಿ ಮುನ್ನಡೆಸುವ ಬಗ್ಗೆ ವಿವರವಾಗಿ ಮಾತನಾಡಿದರು. ರಾಜ್ಯ ಜನತಾ ಪಕ್ಷದ ಅಧ್ಯಕ್ಷ ಡಿ. ಮಂಜುನಾಥ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದಿರಿಪಾಡ್ ತಮ್ಮ ಪ್ರಭಾವ ಪೂರ್ಣ ಭಾಷಣದಲ್ಲಿ ಈ ಆಂದೋಲನಕ್ಕೆ ಬುನಾದಿ ಹಾಕಿದ ಕಳೆದ ಒಂದು ವರ್ಷದ ಬೆಳವಣಿಗೆಗಳನ್ನು ವಿವರವಾಗಿ ನಿರೂಪಿಸಿದರು. ಕಲಕತ್ತೆಯ ಸಮ್ಮೇಳನದ ನಿರ್ಣಯಕ್ಕನುಗುಣವಾಗಿ ತಾನು ಭಾಗವಹಿಸುತ್ತಿರುವ ಪ್ರಥಮ ರಾಜ್ಯಮಟ್ಟದ ಸಮಾವೇಶ ಇದು ಎಂದ ಅವರು ದೇಶವನ್ನು ಸುಡುತ್ತಿರುವ ಸಮಸ್ಯೆಗಳ ಬಗ್ಗೆ ವಿರೋಧ ಪಕ್ಷಗಳ ಜಂಟಿ ಸಮಾಲೋಚನೆಯ ಪ್ರಕ್ರಿಯೆ ಕೂಡಾ ಸುಮಾರು ಹನ್ನೊಂದು ತಿಂಗಳ ಹಿಂದೆ ಬೆಂಗಳೂರಿನಿಂದಲೇ ಆರಂಭವಾಯಿತು ಎಂಬುದನ್ನು ಕಿಕ್ಕಿರಿದು ನೆರೆದಿದ್ದ ಸಭಿಕರಿಗೆ ಜ್ಞಾಪಿಸಿ ಕೊಟ್ಟರು.

ಪ್ರಕ್ರಿಯೆಯ ಆರಂಭ

ಕರ್ನಾಟಕ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಯವರು ಏರ್ಪಡಿಸಿದ್ದ ದಕ್ಷಿಣ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯೊಂದಿಗೆ ಈ ಪ್ರಕ್ರಿಯೆ ಆರಂಭವಾಗಿತ್ತು. ದಕ್ಷಿಣದ ಏಕಮಾತ್ರ ಕಾಂಗ್ರೆಸ್ (ಐ) ಮುಖ್ಯ ಮಂತ್ರಿಗಳನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. ಆದರೆ ಅವರು ಭಾಗವಹಿಸಲಿಲ್ಲ ನಂತರ ವಿಜಯವಾಡಾದಲ್ಲಿ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ರಾಮರಾವ್ ಏರ್ಪಡಿಸಿದ ಸಭೆಯಲ್ಲಿ ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳ ಮುಖ್ಯ ಮಂತ್ರಿಗಳು ಮಾತ್ರವಲ್ಲದೆ 14 ವಿರೋಧ ಪಕ್ಷಗಳ ನಾಯಕರು ಭಾಗವಹಿಸಿದರು. ವಿರೋಧ ಪಕ್ಷಗಳು ಈ ಪ್ರಥಮ ಸಮ್ಮೇಳನ ದೇಶದ ಸಮಗ್ರತೆಗೆ ಬಂದಿರುವ ಧಕ್ಕೆಗಳ ಬಗ್ಗೆ, ವಿಚ್ಛಿದ್ರಕಾರಿ ಶಕ್ತಿಗಳ ಹಾವಳಿಯ ಬಗ್ಗೆ ದೇಶದ ಗಮನ ಸೆಳೆಯಿತು.

ನವದೆಹಲಿಯಲ್ಲಿ ನಡೆದ ಎರಡನೇ ಸಮ್ಮೇಳನ ಪಂಜಾಬ್ ಸಮಸ್ಯೆಯ ಪರಿಹಾರಕ್ಕಾಗಿ ಒಂದು ಸೂತ್ರವನ್ನು ಸೂಚಿಸಿತು. ಈ ಬಗ್ಗೆ ಮಾತನಾಡುತ್ತಾ "ಇದು ಪ್ರಧಾನ ಮಂತ್ರಿಗಳೇ ಸ್ವತ ನೀಡಿದ್ದ 1970 ರ ಅವಾರ್ಡ್‌ನ್ನು ಆಧರಿಸಿತ್ತು 1970ರಲ್ಲೇ ಅದನ್ನು ಜ್ಯಾರಿಗೆ ತಂದಿದ್ದರೆ ನಂತರದ ಸಮಸ್ಯೆಗಳನ್ನು ತಪ್ಪಿಸಬಹುದಾಗಿತ್ತು ವಿರೋಧ ಪಕ್ಷಗಳ ಈ ಸೂಚನೆಯನ್ನು ಅಂಗೀಕರಿಸಿದ್ದರೆ ಈಗಿನ ಪರಿಸ್ಥಿತಿಯನ್ನು ತಪ್ಪಿಸಬಹುದಾಗಿತ್ತು" ಎಂದರು ಇ. ಎಂ. ಎಸ್.

ಶ್ರೀನಗರದಲ್ಲಿ ನಡೆದ ಮೂರನೇ ಸಮ್ಮೇಳನ ಕೇಂದ್ರ ರಾಜ್ಯಗಳ ಸಂಬಂಧಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸಿದ ಕುರಿತು ಮಾತನಾಡುತ್ತಾ, ಕೇರಳದ ಮುಖ್ಯ ಮಂತ್ರಿ ಯೂ ಆಗಿದ್ದ ಇ.ಎಂ.ಎಸ್. ತಮ್ಮ ಅನುಭವಗಳಿಂದಲೇ ಉದಾಹರಣೆಗಳನ್ನು ನೀಡಿದರು. ಕೇಂದ್ರ-ರಾಜ್ಯಗಳ ಪ್ರಶ್ನೆ ಕೇವಲ ವಿರೋಧ ಪಕ್ಷಗಳ ಸಮಸ್ಯೆಯಲ್ಲ. ಅದು ಹೇಗೆ ಕಳೆದ 30 ವರ್ಷಗಳಲ್ಲಿ ಎಲ್ಲರ ಕಾಂಗ್ರೆಸ್ ಮುಖ್ಯ ಮಂತ್ರಿಗಳನ್ನು ಸೇರಿದಂತೆ ಎಲ್ಲ ಮುಖ್ಯ ಮಂತ್ರಿಗಳ ಸಮಸ್ಯೆಯಾಗಿದೆ ಎಂಬುದನ್ನು ಇ. ಎಂ. ಎಸ್. ಮನದಟ್ಟು ಮಾಡಿಕೊಟ್ಟರು. ದೇಶದ ಭದ್ರತೆಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ನಾಲ್ಕು ದಿಕ್ಕಿನಿಂದ ಇರುವ ಅಪಾಯದ ಬಗ್ಗೆ ವಿರೋಧ ಪಕ್ಷಗಳಿಗೆ ಪೂರ್ಣ ಅರಿವು ಇದೆ ಎಂದ ಅವರು ವಿರೋಧ ಪಕ್ಷಗಳೂ ಒಂದು ಬಲಿಷ್ಠ ಕೇಂದ್ರವನ್ನು ಬಯಸುತ್ತದೆ ಎಂದು ಒತ್ತಿ ಹೇಳಿದರು. ಆದರೆ ಇದು ಕೇಂದ್ರ ಸರಕಾರದ ಮತ್ತು ಜನತೆಯ ಐಕ್ಯತೆಯಿಂದ ಅಂದರೆ ಕೇಂದ್ರ ಸರಕಾರದ ಮತ್ತು ಜನತೆಯನ್ನು ಪ್ರತಿನಿಧಿಸುವ ರಾಜ್ಯ ಸರಕಾರಗಳ ಐಕ್ಯತೆಯಿಂದ ಮಾತ್ರ ಸಾಧ್ಯ ಆದರೆ ರಾಜ್ಯಗಳ ಅಧಿಕಾರಗಳನ್ನು ವಿಪರೀತ ಸೀಮಿತಗೊಳಿಸುವುದರಿಂದ ಈ ಐಕ್ಯತೆ ಸಾಧ್ಯವಾಗದು ಎಂದು ಮುಂದುವರಿದು ಅವರು ಹೇಳಿದರು.

ಮೊಯಿಲಿ, ಶಾಲಿನಿ ರೀತಿಯಲ್ಲ !

ಕಲಕತ್ತೆಯಲ್ಲಿ ನಾಲ್ಕನೇ ಸಮ್ಮೇಳನದಲ್ಲಿ ಸದ್ಯದ ಐದು ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳಲ್ಲದೆ ಹಲವು ಮಾಜಿ ಮುಖ್ಯಮಂತ್ರಿಗಳು ಸೇರಿದ್ದರು ಇವರು ಹಿಂದೆ ಕಾಂಗ್ರೆಸ್‌ನಲ್ಲಿದ್ದ ಮುಖ್ಯಮಂತ್ರಿಗಳೂ ಇದ್ದಾರೆ ಎಂದು ಹೇಳಿದ ಇ. ಎಂ. ಎಸ್. ಈ ನಾಲ್ಕು ಸಮ್ಮೇಳನಗಳಲ್ಲಿ ಭಾಗವಹಿಸಿದ ವಿರೋಧ ಪಕ್ಷಗಳಲ್ಲಿ ಹಲವು ಮತಭೇದಗಳಿದ್ದರೂ ಈ ಒಂದು ವರ್ಷದಲ್ಲಿ ಬಹಳಷ್ಟು ವಿಷಯಗಳ ಬಗ್ಗೆ ಸರ್ವಾನುಮತ ಸಾಧಿಸಲು ಶಕ್ಯವಾಗಿದೆ ಎಂದರು. ವಿರೋಧ ಪಕ್ಷಗಳ ಈ ಸಮ್ಮೇಳನಗಳು ಚುನಾವಣೆಯ ಮೇಲೆ ಕಣ್ಣಿಟ್ಟಿವೆ ಎಂಬ ಆರೋಪವನ್ನು ಚರ್ಚಿಸುತ್ತಾ, ಇ. ಎಂ. ಎಸ್. ಅಧಿಕಾರ ಪಡೆಯಲು ವಿರೋಧ ಪಕ್ಷಗಳು ಪ್ರಯತ್ನಿಸುತ್ತಿವೆ ಎಂಬುದು ನಿಜ. ಆದರೆ ಅದನ್ನು ಅವು ಮೊಯಿಲಿ ಶಾಲಿನಿ-ತಾಯಿ ರೀತಿಯಲ್ಲಿ ಸಾಧಿಸಲು ಪ್ರಯತ್ನಿಸುವುದಿಲ್ಲ, ಎಂದು ಮಾರ್ಮಿಕವಾಗಿ ನುಡಿದರು. ಈ ನಾಲ್ಕು ಸಮ್ಮೇಳನಗಳಲ್ಲಿ ಚುನಾವಣಾ ಮೈತ್ರಿ ಚರ್ಚೆಯ ವಿಷಯವೇ ಆಗಿರಲಿಲ್ಲ. ಮುಂಬರುವ ಮದ್ರಾಸ್ ಸಮ್ಮೇಳನದಲ್ಲೂ ಕೂಡಾ, ಅದಕ್ಕೆ ಮೊದಲು ದೆಹಲಿಯ ಮಹಾ ಮಹಿಳೆ ಚುನಾವಣೆ ಘೋಷಿಸದಿದ್ದರೆ, ಚುನಾವಣೆ ಚರ್ಚೆಯ ವಿಷಯವಲ್ಲ ಎಂದು ಹೇಳಿ ಚುನಾವಣೆ ಬರಲಿ, ಬರದಿರಲಿ ವಿರೋಧ ಪಕ್ಷಗಳು ಗಮನಹರಿಸಿರುವ ಜನ ಸಾಮಾನ್ಯರ ಸಮಸ್ಯೆಗಳಂತೂ ಇದ್ದೇ ಇರುತ್ತವೆ, ಆದ್ದರಿಂದ ಆ ಬಗ್ಗೆ ಹೋರಾಟ ನಿಲ್ಲುವುದಿಲ್ಲ ಎಂದು ಇ.ಎಂ.ಎಸ್. ಸ್ಪಷ್ಟಗೊಳಿಸಿದರು.

ಕಾಂಗ್ರೆಸ್ಸೇತರ ಸರಕಾರಗಳ ವಿರೋಧ ಕುತಂತ್ರ ಅಥವಾ ಕೇಂದ್ರ ರಾಜ್ಯಗಳ ಪ್ರಶ್ನೆ ಇಂದು ನಿನ್ನೆಯದಲ್ಲ. 1959 ರಿಂದಲೇ ಇದು ಪ್ರಾರಂಭವಾಗಿತ್ತು. ಆಗ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಿದಾಗ ಉಳಿದ ಪಕ್ಷಗಳು ಅದು ತಮ್ಮ ಸಮಸ್ಯೆಯಲ್ಲ ಎಂದು ಸುಮ್ಮನಿದ್ದವು. ಆದರೆ ಈ 25 ವರ್ಷಗಳಲ್ಲಿ ಹೇಗೆ ಎಲ್ಲರಿಗೂ ಸಮಸ್ಯೆಯ ಅರಿವಾಗಿದೆ ಎಂದು ವಿವರಿಸಿ ಈಗ ವಿರೋಧ ಪಕ್ಷಗಳ ಐಕ್ಯತೆಯನ್ನು ಮುರಿಯಲು ಇಂದಿರಾ ಗಾಂಧಿ ನಡೆಸುತ್ತಿರುವ ಪ್ರಯತ್ನಗಳತ್ತ ಸಭಿಕರ ಗಮನ ಸೆಳೆದರು. "ಅಲ್ಲಿ ನಮ್ಮನ್ನು ಕರೆದು ನಿಮ್ಮದು ಒಂದು ನೀತಿಬದ್ಧ ಪಕ್ಷ. ಆದರೆ ಈ ಜನತಾಪಕ್ಷ ನೋಡಿ, ತೆಲುಗುದೇಶಂ ನೋಡಿ" ಎಂದರೆ ಇನ್ನೊಂದು ಪಕ್ಷದ ಮುಖಂಡರನ್ನು ಕರೆದು, ನಿಮ್ಮ ನಿಲುವು ನನಗೆ ಅರ್ಥವಾಗುತ್ತದೆ ಆದರೆ ಈ ಮಾರ್ಕ್ಸ್‌ವಾದಿಗಳಿಗೆ ಪ್ರಜಾತಂತ್ರದಲ್ಲಿ ನಂಬಿಕೆಯಿಲ್ಲ ನೀತಿನಿಯಮವಿಲ್ಲ ಎನ್ನುತ್ತಾರೆ. ಆದರೆ ಕಲಕತ್ತೆಯಲ್ಲಿ ಸೇರಿದ ನಾವುಗಳೆಲ್ಲಾ ಈ ಆಟ ನಡೆಯಗೊಡಬಾರದು ಎಂದು ನಿರ್ಧರಿಸಿದ್ದೇವೆ. ಯಾವುದೇ ಒಂದು ಕಾಂಗ್ರೆಸ್ಸೇತರ ಸರಕಾರದ ಮೇಲಿನ ಹಲ್ಲೆ ನಮ್ಮೆಲ್ಲರ ಮೇಲಿನ ಹಲ್ಲೆ ಎಂದು ಭಾವಿಸುವುದಾಗಿ ದೃಢ ನಿರ್ಧಾರ ಮಾಡಿದ್ದೇವೆ" ಎಂದು ಇ. ಎಂ. ಎಸ್. ಹೇಳಿದಾಗ ಸಭೆ ಹರ್ಷೋದ್ಗಾರಗಳಿಂದ ತುಂಬಿಹೋಯಿತು.

ಆಂದೋಲನ ಅಗತ್ಯ

ಸಮಾವೇಶದಲ್ಲಿ ಸಿ. ಪಿ. ಐ. ನ ಪರವಾಗಿ ಭಾಗವಹಿಸಿದ ಇಂದ್ರದೀಪ್ ಸಿನ್ಹಾ ಕಲಕತ್ತಾ ಸಮ್ಮೇಳನದ ಅಂಶಗಳ ವಿವರಣೆ ನೀಡಿದರು. ಜನತಾ ಪಕ್ಷದ ಗುರುಪಾದಸ್ವಾಮಿಯವರು ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಪ್ರವೃತ್ತಿಯ ಬಗ್ಗೆ ಮಾತನಾಡಿ ಕರ್ನಾಟಕದಲ್ಲಿ ಮೂಡಿರುವ ಹೊಸ ವಾತಾವರಣದಲ್ಲಿ ಈ ಆಂದೋಲನವನ್ನು ಮುಂದುವರಿಸಬೇಕೆಂದು ಕರೆಯಿತ್ತರು. ಕಾಂಗ್ರೆಸ್ (ಎಸ್)ನ ತುಳಸಿದಾಸ್ ದಾಸಪ್ಪ, ಡಿ. ಎಸ್. ಪಿ. ಯ ಗಂಗಾಧರ್ ಮತ್ತು ಡಿ. ಎಂ. ಕೆ. ಯ ಪರವಾಗಿ ಶಿವಶಂಕರ್ ಆಂದೋಲನದ ಮಹತ್ವದ ಬಗ್ಗೆ ಮಾತನಾಡಿದರು.

ಕರ್ನಾಟಕದ ಮುಖ್ಯಮಂತ್ರಿ, ರಾಮಕೃಷ್ಣ ಹೆಗಡೆಯವರು ಕಾಂಗ್ರೆಸ್ (ಐ) ನ ಕುತಂತ್ರಗಳನ್ನು ಪ್ರಸ್ತಾಪಿಸಿ ಇದರ ವಿರುದ್ಧ ಹೋರಾಟ ನಡೆಯುತ್ತಿದೆ, ಆದರೆ ಕೇವಲ ಇಷ್ಟೇ ಆದರೆ ಉಪಯೋಗವಿಲ್ಲ. ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಗಳ ಕಡೆಗೆ ಗಮನಹರಿಸಬೇಕು. ನಾವು ಸರಕಾರದಲ್ಲಿರಬೇಕಾದುದು ಜನತೆಯ ಸಮಸ್ಯೆಗಳಿಗೆ ಪರಿಹಾರ ಹುಡುಕಲು, ಅದೇ ಸರಕಾರದ ಭದ್ರತೆಗೆ ಆವಶ್ಯಕ ಎಂದರು. ಕಾಶ್ಮೀರದಲ್ಲೂ ಕಾಂಗ್ರೆಸ್ (ಐ) ಕುತಂತ್ರದ ಬಗ್ಗೆ ಮಾತನಾಡುತ್ತಾ, ಡಾ॥ ಫರೂಕ್ ಅಬ್ದುಲ್ಲಾರವರನ್ನು ರಾಷ್ಟ್ರವಿರೋಧಿ ಎನ್ನುವುದು ಪಾಪದ ಕೆಲಸ ಎಂದು ನೋವಿನಿಂದ ಹೇಳಿದರು.

ಸುಂದರ ಬಡ ರಾಜ್ಯದಿಂದ

ಅನಿರೀಕ್ಷಿತವಾಗಿ ಸಭೆಗೆ ಆಗಮಿಸಿದ ಕಾಶ್ಮೀರದ ಮುಖ್ಯ ಮಂತ್ರಿ ಡಾ. ಫರೂಕ್ ಅಬ್ದುಲ್ಲಾರವರ ನೇರ ಮಾತುಗಳು ಸಮಾವೇಶದ ಇನ್ನೊಂದು ಪ್ರಮುಖ ಅಂಶವಾಗಿತ್ತು. ಲಂಡನ್ನಿನಲ್ಲಿ ಶ್ರೀವಾಸ್ತವ್ರೆಯವರ ಹತ್ಯೆಯಾದ ನಂತರ ತನ್ನ ಹಾಗೂ ತನ್ನ ಪಕ್ಷದ ಮೇಲೆ ಹೊರಿಸಿದ ಸುಳ್ಳು ಆಪಾದನೆಗಳಿಂದ ತಾವು ನೊಂದಿರುವಂತೆ ಕಂಡು ಬಂದ ಡಾ. ಫರೂಕ್ ಅಬ್ದುಲ್ಲಾ ಈ ಆರೋಪ ಹೊರಿಸಿರುವ ಹೊಣೆಗೇಡಿಗಳನ್ನು, ಕುತಂತ್ರಿಗಳನ್ನು, ಕೋಮುವಾದಿಗಳನ್ನು ಕಟುವಾಗಿ ಟೀಕಿಸಿದರು. ಕಾಶ್ಮೀರ ಭಾರತಕ್ಕೆ ಸೇರಬೇಕೆಂದು ಶೇಖ್ ಅಬ್ದುಲ್ಲಾ ಪ್ರಯತ್ನಿಸುತ್ತಿದ್ದಾಗ ಅದನ್ನು ವಿರೋಧಿಸಿ, ಶೇಖ್‌ರವರ ವಿರುದ್ಧ ಅಲಿಘರ್‌ನಲ್ಲಿ ಮತ ಪ್ರದರ್ಶನದ ನೇತೃತ್ವ ವಹಿಸಿದ ಮೂರ್ಖ ವ್ಯಕ್ತಿಯೇ ಈಗ ತಾನು ರಾಷ್ಟ್ರ ವಿರೋಧಿಯೆಂದು ಒದರಾಡುತ್ತಿದ್ದಾನೆ ಎಂದು ಹೇಳಿ ಡಾ. ಅಬ್ದುಲ್ಲಾ ಕಾಂಗ್ರೆಸ್ (ಐ) ನಾಯಕರ ಗೋಸುಂಬೆತನವನ್ನು, ನಕಲಿ ಜಾತ್ಯತೀತತೆಯನ್ನು ಬಯಲಿಗೆಳೆದರು.

ಈ ಸುಳ್ಳು ಆರೋಪಗಳನ್ನು ಹಾಗೂ ಸರಕಾರ ಉರುಳಿಸುವ ಕುತಂತ್ರಗಳನ್ನು ಯಶಸ್ವಿಯಾಗಿ ಎದುರಿಸುವಲ್ಲಿ ಕಲ್ಕತ್ತೆಯಲ್ಲಿ ಸೇರಿದ್ದ ವಿರೋಧ ಪಕ್ಷಗಳು ನೀಡಿದ ನೆರವು ಅಮೂಲ್ಯ, ಹೆಗಡೆಯವರು ಕರ್ನಾಟಕದಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿ ನನಗೆ ಬಹಳ ಸಹಾಯವಾಗಿತ್ತೆಂದು ಅದಕ್ಕೆ ತಮ್ಮ ಅಪಾರ ಕೃತಜ್ಞತೆ ವ್ಯಕ್ತಪಡಿಸಿದ ಡಾ. ಫರೂಕ್ ಅಬ್ದುಲ್ಲಾ "ದೇವರೇ ಮೇಲಿಂದ ಇಳಿದು ಬಂದು ಪ್ರಯತ್ನಿಸಿದರೂ ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ" ಎಂದು ಖಡಾ ಖಂಡಿತವಾಗಿ ಘೋಷಿಸಿದಾಗ ಸಭೆ ದೀರ್ಘ ಕರತಾಡನದಿಂದ ತುಂಬಿಹೋಯಿತು. "ಸುಂದರ, ಆದರೊಂದಿಗೆ ಬಡತನ ಪೀಡಿತ ರಾಜ್ಯ" ಎಂದು ಅವರೇ ವರ್ಣಿಸಿದ ಕಾಶ್ಮೀರದ ಮುಖ್ಯಮಂತ್ರಿಗಳು "ದೇಶಾದ್ಯಂತ ನಡೆಯುತ್ತಿರುವ ಹೋರಾಟದಲ್ಲಿ ನಾವು ಸಹ ಭಾಗಿಗಳು. ನಾವೆಲ್ಲರೂ ಭಾರತೀಯರು ಒಟ್ಟು ಸೇರಿ ನಮ್ಮ ಜನರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸೋಣ" ಎಂದು ಕರೆ ನೀಡಿದಾಗ ನೆರೆದಿದ್ದ ಸಭಿಕರಲ್ಲಿ ಹಲವರಿಗೆ ಕಾಂಗ್ರೆಸ್ (ಐ)ನ ನಕಲಿ ಜಾತ್ಯತೀತತೆ, ಕಾಂಗ್ರೆಸ್ (ಐ)ಗೆ ತಾನೇ ಏಕೈಕ ಪರ್ಯಾಯ ವೆನ್ನುತ್ತಿದ್ದವರ ಭಗವಾ ರಾಜಕೀಯದ ಮೂರ್ಖತನದ ಸ್ಪಷ್ಟ ಅರಿವು ಮೂಡಿರಬೇಕು.

ಈ ರೀತಿ ಹಲವು ದೃಷ್ಟಿಗಳಿಂದ ಯಶಸ್ವಿಯಾಗಿ ನೆರವೇರಿದ ಈ ಸಮಾವೇಶ ಮತ್ತು ನಂತರ ನಡೆದ ಬೃಹತ್ ಬಹಿರಂಗ ಸಭೆ ಕರ್ನಾಟಕದ ಜನಪರ ಆಂದೋಲನದಲ್ಲಿ ಒಂದು ಹೊಸ ಹೆಜ್ಜೆ ಎನ್ನಬಹುದು.

ಬೇಡಿಕೆ ದಿನಾಚರಣೆ

ಅಖಿಲ ಭಾರತ ವಿರೋಧ ಪಕ್ಷಗಳ ಕರೆಯ ಮೇರೆಗೆ 13-2-84 ರಂದು ಹೂವಿನ ಹಡಗಲಿ ಮತ್ತು ಹರಪನಹಳ್ಳಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡತ್ವದಲ್ಲಿ ಮೆರವಣಿಗೆ ಹಾಗೂ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಹಡಗಲಿಯಲ್ಲಿ ಎಸ್. ಎಫ್. ಐ. ನ ಕಾ॥ ಮಂಜುಳಾ, ರಂಗನಾಥ ಹವಾಲ್ದಾರ್, ರೈತ ಸಂಘದ ಪಿ. ಆರ್. ವೆಂಕಟೇಶ್ ಮುಂತಾದವರು ಮಾತನಾಡಿದರು.

ಹರಪನ ಹಳ್ಳಿಯಲ್ಲಿ ಮೆರವಣಿಗೆ ನಡೆದು ತಹಸೀಲ್ದಾರ್ ರವರಿಗೆ ಮನವಿ ಪತ್ರ ಅರ್ಪಿಸಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಬೀಡಿ ಕಾರ್ಮಿಕರ ಮುಖಂಡ ಕಾ. ದಾವರ್ ಸಾಬ್. ಜನತಾ ಪಕ್ಷದ ಶ್ರೀ ದಿವಾಕರ್, ಎಸ್. ಎಫ್. ಐ. ನ ಕಾ. ಪರಶುರಾಮ್, ಕೃಷ್ಣಾ ಜಿ ಕಲಾಲ್ ಮುಂತಾದವರು ಮಾತನಾಡಿದರು.

ಇಂದಿರಾ ಗಾಂಧಿಯ ನುಡಿಗಳ ಬಗ್ಗೆ

—ಎಂ. ಬಸವಪುನ್ನಯ್ಯ

(ಕಳೆದ ಸಂಚಿಕೆಯಿಂದ)

ಪ್ರಮುಖ ಕೈಗಾರಿಕೆಯನ್ನು ಕಟ್ಟುವುದು

ಭಾರತಕ್ಕೆ ಲಭಿಸುವ ಸೋವಿಯತ್ ಸಹಾಯ ಮತ್ತು ಸರ್ಕಾರಿ ವಿಭಾಗದ ಕೈಗಾರಿಕೆಯ ಬಗ್ಗೆ ಸಿ.ಪಿ.ಐ. (ಎಂ)ನ ನಿಲುವೇನು? ಇದರ ಬಗ್ಗೆ ನಮ್ಮ ಪಕ್ಷದ ಧೋರಣೆಯು ಬಹಳ ಸ್ಪಷ್ಟವಾಗಿ ನಮ್ಮ ಕಾರ್ಯಕ್ರಮದ 14ನೇ ಪರಿಚ್ಛೇದ ಹೀಗೆ ವ್ಯಕ್ತ ಪಡಿಸುತ್ತದೆ. "ಜಾಗತಿಕ ಸಮಾಜವಾದಿ ಪದ್ಧತಿಯ ಉದಯದಿಂದಾಗಿ ಬಂಡವಾಳ ಶಾಹಿಯು ಕೆಲವು ಭಾರೀ ಉದ್ದಿಮೆಗಳ ಯೋಜನೆಗಳನ್ನು ನಿರ್ಮಿಸಲು ಸಮಾಜವಾದೀ ಸಹಾಯವನ್ನು ಉಪಯೋಗಿಸುತ್ತಿದೆ ಆದರೆ ಅದೇ ವೇಳೆ ಈ ಸಹಾಯವನ್ನದು ನಿಜವಾಗಿ ಸಾಮ್ರಾಜ್ಯಶಾಹಿ ಗುತ್ತೇದಾರಿಗಳ ಕೂಡ ಹೆಚ್ಚು ಲಾಭಕರವಾದ ಒಪ್ಪಂದಗಳನ್ನು ಮಾಡಿಕೊಳ್ಳುವ ಅತೀ ಉತ್ತಮ ಚೌಕಾಶಿಯ ಕಣವನ್ನಾಗಿ ಉಪಯೋಗಿಸುತ್ತದೆ." ಅಷ್ಟು ಮಾತ್ರವಲ್ಲ ಸರ್ಕಾರದ ಪಂಚವಾರ್ಷಿಕ ಯೋಜನೆಯ ಬಗ್ಗೆ ನಮ್ಮ ಪಕ್ಷ ಹೀಗೆ ವಿವರಿಸುತ್ತದೆ "ಕೈಗಾರಿಕಾ ವಿಸ್ತರಣೆಯಲ್ಲಿ, ಅದರಲ್ಲೂ ಮುಖ್ಯವಾಗಿ ಸರಕಾರಿ ವಿಭಾಗದಲ್ಲೂ ಕೆಲವೊಂದು ಭಾರೀ ಹಾಗೂ ಯಂತ್ರ ನಿರ್ಮಾಣ ಕೈಗಾರಿಕೆಗಳ ಸ್ಥಾಪನೆಯಲ್ಲಿ ಈ ಯೋಜನೆಯು ಅತ್ಯಂತ ಪ್ರಮುಖ ಸ್ವರೂಪವನ್ನು ಕಾಣಬಹುದು ಸಮಾಜವಾದಿ ದೇಶಗಳ ನಿಸ್ವಾರ್ಥ ಸಹಾಯವಿಲ್ಲದಿದ್ದರೆ, ಮುಖ್ಯವಾಗಿ ಸೋವಿಯತ್ ದೇಶದ ಸಹಾಯವಿಲ್ಲದಿದ್ದರೆ ಈ ದೊಡ್ಡ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಜೊತೆಯಲ್ಲೇ ಸಾರಿಗೆ ಸಂಪರ್ಕ, ವಿದ್ಯುಚ್ಛಕ್ತಿ ಇವುಗಳನ್ನು ಸಾರ್ವಜನಿಕ ಕ್ಷೇತ್ರ, ಖಾಸಗಿ ಗುತ್ತೇದಾರಿ ಬಂಡವಾಳದ ವರ್ಗ ಹಿತವನ್ನು ರಕ್ಷಿಸಲಿಕ್ಕಾಗಿ, ಭಾರತದಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟಲು ಅನುಕೂಲವಾದ ಉಪಕರಣವನ್ನಾಗಿ ಉಪಯೋಗಿಸುವುದಕ್ಕೂ, ಪ್ರಭುತ್ವ ಶಕ್ತಿಯ ರಾಜಕೀಯ ನೇತೃತ್ವಕ್ಕೆ ಕೈ ಗೊಂಬೆಯಾಗಿ ಅದನ್ನು ಉಪಯೋಗಿಸುವುದಕ್ಕಾಗಿಯೆಂದೂ ಪೂರ್ಣವಾಗಿ ತಿಳಿದೇ ಸಿ. ಪಿ. ಐ(ಎಂ) ಸರ್ಕಾರಿ ಕ್ಷೇತ್ರಕ್ಕೆ ಬೆಂಬಲ ನೀಡುತ್ತಿರುವುದು.

ಬಹಳಷ್ಟು ಬೇಜವಾಬ್ದಾರಿತನ, ಅದಕ್ಷತೆ ಮತ್ತು ಭ್ರಷ್ಟಾಚಾರದಿಂದ ಕೂಡಿದೆಯೆಂದೂ ಅನೇಕ ಉದ್ದಿಮೆಗಳು ನಷ್ಟದಿಂದ ನಡೆಯುತ್ತಿದೆ ಎಂದು ತಿಳಿದೇ ನಾವು ಅವರ ಸಾರ್ವಜನಿಕ ಕ್ಷೇತ್ರಗಳಿಗೆ ಬೆಂಬಲ ನೀಡುತ್ತಾ ಬಂದಿದ್ದೇವೆ.

ಅರ್ಧ ಸತ್ಯಗಳು ಮಾತ್ರ

ತನ್ನ ಸಮರ್ಥ ಆಡಳಿತದಲ್ಲಿ ಮಾಡಿದ 'ಸಾಧನೆ'ಗಳ ಒಂದು ದೊಡ್ಡ ಪಟ್ಟಿಯನ್ನೇ ಶ್ರೀಮತಿ ಇಂದಿರಾ ಗಾಂಧಿಯವರು ಮುಂದಿಟ್ಟಿದ್ದಾರೆ. ಆದರೆ ಕೆಲವು ನಿಜಾಂಶವನ್ನು ಅವರು ಮರೆಮಾಚುವ ಮುಖ್ಯ ಅಂಶವಾದ ಗುತ್ತೇದಾರಿ ಬಂಡವಾಳದಾರರ ಕುಟುಂಬಗಳ ಭೂತಾಕಾರದ ಬೆಳವಣಿಗೆಯನ್ನೇ ತೆಗೆದು ಕೊಳ್ಳೋಣ. ಭಾರತದ ದುಡಿಯುವ ಸ್ತ್ರೀ-ಪುರುಷರ ಖರ್ಚಿನಲ್ಲೇ ಈ ಬೃಹದಾಕಾರದ ಬೆಳವಣಿಗೆಯುಂಟಾಗಿದ್ದು. ಭಾರತದ ಹಿರೇ ಬಂಡವಾಳ ಶಾಹಿ ಗುತ್ತೇದಾರಿ ಕುಟುಂಬಗಳಾದ ಟಾಟ ಮತ್ತು ಬಿರ್ಲಾರಿಗೆ 1947-48 ರಲ್ಲಿ ಇದ್ದ ಒಟ್ಟು ಆಸ್ತಿ ಕೇವಲ 14 ಕೋಟಿ ರೂ.ಗಳಾಗಿತ್ತು. ಆದರೆ 1981 ರಲ್ಲಿ, 35 ವರ್ಷಗಳ ಕಾಂಗ್ರೆಸ್ಸ್ ಸ್ವರಾಜ್ಯದ ನಂತರ ಅವೆರಡು ಅತ್ಯಂತ ದೊಡ್ಡ ಗುತ್ತೇದಾರಿಗಳಾಗಿ ಬೆಳೆದುವು. ಟಾಟಾ ರವರ ಆಸ್ತಿ ಸುಮಾರು ರೂ. 1840 ಕೋಟಿಗಳು ಮತ್ತು ಬಿರ್ಲಾ ರವರ ಆಸ್ತಿ ಸುಮಾರು ರೂ 1700 ಕೋಟಿಗಳಾಗಿವೆ. ಇದರ ಜೊತೆಗೆ 75-100 ಗುತ್ತೇದಾರಿ ಬಂಡವಾಳಗಾರರೂ ಬೆಳೆದು ಬಂದಿದ್ದಾರೆ ಅವರು ಪ್ರಕಟಿಸಿದ ಆಸ್ತಿಯ ಆಧಾರದಿಂದಲೇ ಅವರು ಗುತ್ತೇದಾರಿಗಳೆಂದು ತಿಳಿಯಬಹುದು. ಒಟ್ಟು 200 ಕೋಟಿ ರೂಗಳಿಗಿಂತ ಹೆಚ್ಚು ಆಸ್ತಿಯಿರುವ ಕೆಲವು ಗುತ್ತೇದಾರಿಗಳ ಹೆಸರುಗಳನ್ನು ಕೆಳಗೆ ಕೊಡುತ್ತಿದ್ದೇವೆ.

	ಕುಟುಂಬ	ಆಸ್ತಿ (ಕೋಟಿಯಲ್ಲಿ) 1981 ರ ಲೆಕ್ಕ
1.	ಬಜಾಜ್	215
2.	ಲಾರ್ಸನ್ ಟ್ಯೂಬ್ರೊ	220
3.	ಮಹೇಂದ್ರ ಅಂಡ್ ಮಹೇಂದ್ರ	225
4.	ಟಿ. ವಿ. ಎಸ್. ಅಯ್ಯಂಗಾರ್	225
5.	ಸಿಂಧ್ಯಾ	230
6.	ಮೋದಿ	241
7.	ಹಿಂದೂಸ್ತಾನ್ ಲೀವರ್	247
8.	ಅಶೋಕ್ ಲೇ ಲ್ಯಾಂಡ್	252
9.	ಶ್ರೀರಾಂ	270
10.	ರಿಲಯನ್ಸ್ ಟೆಕ್ಸ್‌ಟೈಲ್ಸ್	270
11	ಕಿರ್ಲೋಸ್ಕರ್	278
12	ಬಾಂಗುರ್	280
13.	ಸಾರಾಬಾಯ್	331
14.	ಐ. ಸಿ. ಐ.	337
15.	ಎ. ಸಿ. ಸಿ.	342
16	ಥಾಪರ್	430
17.	ಜೆ ಕೆ ಸಿಂಘಾನಿಯ	520
18	ಮಫತ್ ಲಾಲ್	535
19.	ಬಿರ್ಲಾ	1692
20	ಟಾ ಟಾ	1840

ಅಂತರ ರಾಷ್ಟ್ರೀಯ ತಿಮಿಂಗಿಲಗಳೊಂದಿಗೆ ಸೇರಿಕೊಂಡಿರುವ ಹಿಡಿಯಷ್ಟು ಗುತ್ತೇದಾರಿಗಳನ್ನು ಬೆಳೆಸಿಕೊಂಡು ಕಡು ದಾರಿದ್ರ್ಯದಲ್ಲಿ ಸಿಕ್ಕಿ ನರಳುತ್ತಿರುವವರನ್ನು ಮೇಲೆಕ್ಕೆತಲು ಇಂದಿರಾ ಗಾಂಧಿ ಪ್ರಯತ್ನಿಸುತ್ತಿದ್ದಾರೇನು? ದಬ್ಬಾಳಿಕೆ ಗೊಳಗಾದ 75 ಕೋಟಿ ಜನತೆಯ ರಕ್ತವನ್ನೂ, ಕಣ್ಣೀರನ್ನೂ ಹೀರಿ ಕುಡಿದು 75ಕ್ಕೂ ಹೆಚ್ಚಿನ ಗುತ್ತೇದಾರಿ ಬಂಡವಾಳಗಾರರನ್ನು ಬೆಳೆಸುವುದು ಅತಿ ದೊಡ್ಡ ಸಾಧನೆಯೇ? ಇಷ್ಟು ಸಾಲದೆಂಬಂತೆ ಸಮಾಜವಾದದೆಡೆಗೆ ಭಾರತೀಯ ಮಾರ್ಗ ಎಂದು ಅದನ್ನು ಅಪ್ರಾಮಾಣಿಕವಾಗಿ ಹೆಸರಿಸುವುದು ಬೇರೆ! ದಾರಿದ್ರ್ಯ ರೇಖೆಯ ಕೆಳಗೆ ಜೀವನ ನಡೆಸುತ್ತಿರುವ 35 ಕೋಟಿ ಭಾರತೀಯರ ಬಗ್ಗೆ ಅದರಲ್ಲಿ ಒಂದು ಮಾತು ಹೇಳಲಿಲ್ಲವೇಕೆ? ಪ್ರಪಂಚದಲ್ಲೇ ಅತ್ಯಂತ ಕಡಿಮೆ ವಾರ್ಷಿಕ ವರಮಾನವಿರುವ ಹತ್ತು ದೇಶಗಳಲ್ಲಿ ಒಂದಾಗಿದೆ ಭಾರತವೆಂಬ ಸತ್ಯವನ್ನು ಮರೆ ಮಾಚಿ ಕೊಳ್ಳುವುದೇಕೆ? ಗ್ರಾಮಾಂತರ ಪ್ರದೇಶಗಳಲ್ಲಿ, ನಗರಗಳಲ್ಲಿ ಸ್ತ್ರೀ-ಪುರುಷರೂ ಸೇರಿದಂತೆ ಕೋಟಿ ಗಟ್ಟಲೆ ಉದ್ಯೋಗ ವಿಲ್ಲದವರ ಬಗ್ಗೆ ಸಂತಾಪವಾಗಲೀ, ಅನುಕಂಪವಾಗಲಿ ಅದರಲ್ಲಿ ಕಾಣಲಿಲ್ಲವೇಕೆ? ಜಾತೀಯ-ಮತೀಯ ಕೋಮುವಾದಿ ಸಂಕುಚಿತ ವಾದಿಗಳ, ಛಿದ್ರಕಾರಿ ಸಂಘಟನೆಗಳು ಶಕ್ತಿಗೊಳ್ಳುತ್ತಿರುವುದರ ಬಗ್ಗೆ ಯಾದರೂ ಒಂದು ಮಾತು ಅದರಲ್ಲಿ ಹೇಳಲಿಲ್ಲವೇಕೆ?

ಏಕ ಮಾತ್ರ ಆದರ್ಶ

ಅತಿ ಶೀಘ್ರ ಗತಿಯಲ್ಲಿ ಧನವಂತರಾಗುವುದು ಹೇಗೆ, ತೆರಿಗೆಯನ್ನು ಕೊಡದೆ ಕಬಳಿಸುವುದು, ಕಪ್ಪು ಹಣ ಸೇರಿಸುವುದು, ರಾಜಕೀಯ ಅಧಿಕಾರವನ್ನು ಕೊಂಡು ಹೆಚ್ಚಿನ ಆಸ್ತಿಯನ್ನು ಒಟ್ಟು ಗೂಡಿಸಿ ಒಂದು ಪಕ್ಷದ ಅಧಿಕಾರವನ್ನು ನಿರಂತರವಾಗಿ ಮುಂದುವರಿಸುವುದು ಹೇಗೆ? ಇದೇ ಇಂದಿರಾ ಗಾಂಧಿ ಸರ್ಕಾರದ ಒಂದೇ ಒಂದು ಆದರ್ಶ. ಆದ್ದರಿಂದ "ನನ್ನ ವಿದೇಶಿ ಧೋರಣೆ ಪ್ರಗತಿ ಪರ. ಅದು ನನ್ನ ಆಂತರಿಕ ಧೋರಣೆಯ ಮುಂದುವರಿಕೆಯೇ ಹೊರತು ಭಿನ್ನವಲ್ಲ"ವೆಂದು ಹೇಳುವ ಇಂದಿರಾ ಗಾಂಧಿಯ ಮಾತುಗಳು ವಂಚನೆಯಷ್ಟೇ ಅಲ್ಲ ತಿಳಿಗೇಡಿತನವೆಂದು ಹೇಳ ಬಹುದು.

ಇಂದಿನ ಜಾಗತಿಕ ಪರಿಸ್ಥಿತಿಯನ್ನು ಗಮನಿಸುವಾಗ ಒಂದನ್ನು ಸ್ಪಷ್ಟವಾಗಿ ಅರಿತು ಕೊಳ್ಳುವುದು ಅವಶ್ಯ. ಅಂತರ ರಾಷ್ಟ್ರೀಯವಾಗಿ ಅಲಿಪ್ತ ಧೋರಣೆ ಅಂಗೀಕರಿಸಿದರೂ ಪ್ರಜಾ ಪ್ರಭುತ್ವ ಹಾಗೂ ಮೂಲ ಭೂತ ಹಕ್ಕುಗಳನ್ನೇ ನಿಷೇಧಿಸುವ ಆಂತರಿಕವಾಗಿ ಪ್ರತಿಗಾಮಿ ಧೋರಣೆ ತಾಳಿರುವ ಪಾಕಿಸ್ತಾನ್ ಬಂಗ್ಲಾದೇಶ ಮಿಲಿಟರಿ ಪ್ರಭುತ್ವಗಳನ್ನೊಳಗೊಂಡ ಅಂತಹ ಆಡಳಿತಗಾರರಿಗೂ ಬೆಂಬಲ ನೀಡ ಬೇಕೆಂದು ಶ್ರೀಮತಿ ಇಂದಿರಾ ಗಾಂಧಿ ಬಯಸುತ್ತಾರೇನು?

ಕಾಂಗ್ರೆಸ್ ಪ್ರಭುತ್ವದ ಆಂತರಿಕ ಧೋರಣೆ ಮಾತ್ರ ಪ್ರತಿಗಾಮಿಯೂ, ಜನ ವಿರೋಧಿಯಾಗುವಾಗಲೇ, ಅದರ ವಿದೇಶ ನೀತಿ ಪುರೋಗಾಮಿ ಎಂದೂ, ಕ್ರಾಂತಿಕಾರಿ ಎಂದೂ ಹೇಳಿ ಪ್ರಶಸ್ತಿ ಪತ್ರ ಕೊಡುವುದೆಂಬ ತಪ್ಪನ್ನು ನಮ್ಮ ಪಕ್ಷವಾದ ಸಿ. ಪಿ ಐ (ಎಂ) ಎಂದಿಗೂ ಮಾಡಿಲ್ಲ. ವಿಶ್ವಶಾಂತಿಗೆ ಬೆಂಬಲ ಕೊಡುವುದು, ರಾಷ್ಟ್ರೀಯ ಸ್ವಾತಂತ್ರ್ಯದ ತತ್ವವನ್ನು ಉಳಿಸುವುದು ಸೈನಿಕ ಬಣಕ್ಕೆ ಸೇರದೆ ಸ್ವತಂತ್ರವಾಗಿರುವುದು ಇದರಿಂದ ವಿದೇಶ ಧೋರಣೆಯ ಒಂದು ಸಂಪೂರ್ಣ ಚಿತ್ರ ದೊರೆಯುವುದಿಲ್ಲ. ವಿದೇಶಿ ಗುತ್ತೇದಾರಿ ಬಂಡವಾಳ ಗಾರರಿಂದಲೂ, ಬಹು ರಾಷ್ಟ್ರ ಗುತ್ತೇದಾರಿಗಳಿಂದಲೂ ಹೆಚ್ಚಿನ 'ಸಹಾಯ'ವನ್ನು ಪಡೆಯುವ ಈ ರಾಜಕೀಯದ ಹಿನ್ನಲೆಯೂ ಸಹ ವಿದೇಶ ಧೋರಣೆಯ ಒಂದು ಭಾಗವಾಗಿದೆ. ಅಷ್ಟೇ ಅಲ್ಲ ಹಲವಾರು ಸಮಸ್ಯೆಗಳಲ್ಲಿ ದಿಟ್ಟ ತನದ ಸಾಮ್ರಾಜ್ಯಶಾಹಿ ವಿರೋಧೀ ನಿಲುವು ತಾಳದೇ ಇದ್ದದ್ದೂ ಅಂತಹ ವಿದೇಶ ಧೋರಣೆಯ ಒಂದು ಭಾಗವೇ. ಇದನ್ನೆಲ್ಲವನ್ನೂ ನಿರ್ಲಕ್ಷಿಸಿ ಶ್ರೀಮತಿ ಇಂದಿರಾ ಗಾಂಧಿಯ ವಿದೇಶಿ ಧೋರಣೆಗೆ ಸ್ತುತಿಗೀತೆಗಳನ್ನು ಹಾಡಲು ಒಬ್ಬ ಮಾರ್ಕ್ಸ್‌ವಾದಿಗೆ ಹೇಗೆ ಸಾಧ್ಯ?

ಹಿರೇ ಬಂಡವಾಳ ಶಾಹಿಯ ನೇತೃತ್ವದಲ್ಲಿ ಬಂಡವಾಳ ಶಾಹಿ ಭೂಮಾಲಿಕ ವರ್ಗಗಳ ವರ್ಗ ಹಿತವನ್ನಷ್ಟೇ ಈ ಪ್ರಭುತ್ವ ಮತ್ತೂ ಸರಕಾರ ಪ್ರತಿನಿಧಿಸುತ್ತವೆ ಎಂದು ಸಿ ಪಿ. ಐ (ಎಂ)ನ ಅಭಿಪ್ರಾಯ. ಇದರಿಂದಲೇ ಅಧಿಕಾರ ಶಕ್ತಿ ಹೊಂದಿರುವವರೊಡನೆ, ಅವರು ಪ್ರತಿನಿಧಿಸುವ ವರ್ಗ ಹಿತಗಳೊಡನೆ ಯಾವ ರೀತಿಯಲ್ಲಿ ಒಪ್ಪಂದಕ್ಕೆ ಬರದ ಹಾಗೂ ಕ್ರಾಂತಿಕಾರಿಯಾದ ನಮ್ಮ ನಿಲುವು ರೂಪು ಗೊಳ್ಳುವುದು ಮೂಲ ಭೂತವಾಗಿ ಈ ಭಿನ್ನತೆಯನ್ನು ಮರೆ ಮಾಚಿ ಪರಸ್ಪರರನ್ನೂ ಜನತೆಯನ್ನು ವಂಚಿಸುವ ಈ ಪ್ರಯತ್ನವೇಕೆ?

ಆದ್ದರಿಂದಲೇ ನಮ್ಮ ಪಕ್ಷದ ಕಾರ್ಯಕ್ರಮದ 108 ನೇ ಪರಿಚ್ಛೇದದಲ್ಲಿ ಸ್ಪಷ್ಟವಾಗಿ ವಿವರಿಸಿದೆ "ಆಳು ಕಾಂಗ್ರೆಸ್ ಪಕ್ಷದ ಜನತೆಗೆ ಯಾವುದೇ ತಂತ್ರಾತ್ಮಕವಾದ ಐಕ್ಯತೆಯ ಕುರಿತಾಗಲೀ, ಐಕ್ಯರಂಗದ ಕುರಿತಾಗಲೀ ಭ್ರಮೆಯನ್ನಿಟ್ಟು ಕೊಳ್ಳದೆ, ಆದರೆ ಅದೇ ವೇಳೆ ರಾಷ್ಟ್ರದ ನಿಜವಾದ ಹಿತಾಸಕ್ತಿಗೆ ಅನುಗುಣವಾದ ಶಾಂತಿ, ವಸಾಹತು ಶಾಹಿ ವಿರುದ್ಧ ಪ್ರಶ್ನೆ ಇವುಗಳ ಮೇಲೆಲ್ಲಾ ಸರಕಾರಕ್ಕೆ ಸಂಪೂರ್ಣ ಬೆಂಬಲ ಕೊಡಲು ಕಾರ್ಮಿಕ ವರ್ಗವು ಹಿಂಜರಿಯಲಾರದು"

ರಾಜಕೀಯ ಚಿಂತನೆ ನಡೆಸುವ ಎಲ್ಲರಿಗೂ ಸಿ ಪಿ ಐ. (ಎಂ) ನ ಈ ನಿಲುವು ಸ್ಪಷ್ಟವಾಗಿ ಅರ್ಥವಾಗುತ್ತದೆ ಆದರೆ ಬುದ್ಧಿ ಗಲಿಬಿಲಿಗೊಂಡವರಿಗೆ ಉದ್ದೇಶಪೂರ್ವಕ ಕುಚೇಷ್ಟೆ ಕೋರರಿಗೆ ಇದು ಅರ್ಥವಾಗದು.

ಅಂತರ್‌ರಾಷ್ಟ್ರೀಯ ಮಹಿಳೆಯರ ದಿನಾಚರಣೆ

ಬಂಡವಳ ಶಾಹಿ ಜಗತ್ತಿನಲ್ಲಿ ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಅಣುಯುದ್ಧದ ಭೀತಿಯು ಪ್ರತಿ ವರ್ಷ ಮಾರ್ಚ್ 8 ರಂದು ಆಚರಿಸಲ್ಪಡುವ ಅಂತರ್‌ರಾಷ್ಟ್ರೀಯ ಮಹಿಳೆಯರ ದಿನಾಚರಣೆಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ ಭಾರತದೇಶದಲ್ಲಿ, ಬೆಲೆಯೇರಿಕೆ, ಕಾರ್ಖಾನೆಗಳ ಮುಚ್ಚುಳ, ಲಾಕೌಟ್, ಕೆಲಸದಿಂದ ತೆಗೆದು ಹಾಕುವಿಕೆ ಯಂತ್ರೀಕರಣಗಳೆಲ್ಲ, ದುಡಿಯುವ ಹಾಗೂ ಇತರ ಮಹಿಳೆಯರ ಪರಿಸ್ಥಿತಿಯನ್ನು ಹದಗೆಡಿಸಿದೆ ಆದ್ದರಿಂದ ಈ ವರ್ಷ ಮಾರ್ಚ 8 ರಂದು, ಮಹಿಳೆಯರ ದಿನಾಚರಣೆಯನ್ನು ಅತಿ ಗಂಭೀರವಾಗಿ ಆಚರಿಸಲು ಅಖಿಲಭಾರತ ಪ್ರಜಾಪ್ರಭುತ್ವವಾದಿ ಮಹಿಳೆಯರ ಸಂಘಟನೆ (ಎ ಐ ಡಿ. ಡಬ್ಲ್ಯೂ. ಎ.) ನಿರ್ಧರಿಸಿದೆ.

ಸಿ. ಐ. ಟಿ. ಯು. ರಾಜ್ಯ ಮಂಡಲಿಯ ನಿರ್ಣಯಗಳು

ಜೀವ ವಿಮಾ ನಿಗಮವನ್ನು ವಿಭಜಿಸುವುದರ ವಿರುದ್ಧ

ಭಾರತದ ಜೀವವಿಮಾ ನಿಗಮ (ಎಲ್ಲೈಸಿ) ಅನ್ನು ಐದು ಪ್ರತ್ಯೇಕ ನಿಗಮಗಳನ್ನಾಗಿ ವಿಭಜಿಸುವ ಉದ್ದೇಶದಿಂದ ಕೇಂದ್ರ ಸರಕಾರವು ಪಾರ್ಲಿಮೆಂಟಿನಲ್ಲಿ ಮಂಡಿಸಿರುವ 1983ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ಸ್ ಮಸೂದೆಯನ್ನು 1984ರ ಫೆಬ್ರವರಿ 19 ಮತ್ತು 20 ರಂದು ದಾಂಡೇಲಿಯಲ್ಲಿ ಜರುಗಿದ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಳಿಯ ಸಭೆಯು ಬಲವಾಗಿ ವಿರೋಧಿಸುತ್ತದೆ. ಎಲ್ಲೈಸಿಯ ಉದ್ದೇಶಿತ ವಿಭಜನೆಯು ದೇಶದ ಹಿತಾಸಕ್ತಿಯನ್ನಾಗಲೀ, ಪಾಲಿಸಿದಾರರ ಹಿತಾಸಕ್ತಿಯನ್ನಾಗಲೀ ಉತ್ತಮ ಪಡಿಸಲಾರದೆಂದೂ ಎಲ್ಲೈಸಿಯ ಕಾರ್ಮಿಕರ ಹಕ್ಕುಗಳ ಮತ್ತು ಸವಲತ್ತುಗಳ ಮೇಲೆ ದಾಳಿ ಮಾಡುವುದೇ ಈ ಮಸೂದೆಯ ಉದ್ದೇಶವೆಂಬುದೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಜೀವವಿಮಾ ಕೈಗಾರಿಕೆಯ ರಾಷ್ಟ್ರೀಕರಣವಾದ ನಂತರದ 27 ವರ್ಷಗಳಲ್ಲಿ ಈ ಸಂಸ್ಥೆಯು ಮಹತ್ತರವಾದ ಪ್ರಗತಿಯನ್ನು ಸಾಧಿಸಿದೆ. 5 ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ ಕೇಂದ್ರ ಸರಕಾರವು ಎಲ್ಲೈಸಿಯ ಲಾಭದಲ್ಲಿ ತನ್ನ ಪಾಲು ಎಂಬ ನೆಲೆಯಲ್ಲಿ ಕಳೆದ ಎರಡು ವರ್ಷಗಳಲ್ಲೇ (1981-82) 39ಕೋಟಿರೂಪಡೆದಿರುವುದನ್ನುಗಮನಿಸಿದರೆ ಈ ಸಂಸ್ಥೆಯು ಎಷ್ಟು ಲಾಭದಾಯಕವಾಗಿ ಬೆಳೆಯುತ್ತಿದೆಯೆಂಬುದು ಸ್ಪಷ್ಟವಾಗುತ್ತದೆ. ಈ ಮಹತ್ತರ ಪ್ರಗತಿಯು ಎಲ್ಲೈಸಿಯಲ್ಲಿ ದುಡಿಯುವ ಕಾರ್ಮಿಕರ ಪ್ರಾಮಾಣಿಕ ಕೆಲಸ ಮತ್ತು ಪರಿಶ್ರಮಗಳಿಂದಾಗಿ ಸಾಧ್ಯವಾಗಿದೆಯೆಂಬುದನ್ನು ಈ ಸಭೆಯು ಒತ್ತಿ ಹೇಳುತ್ತದೆ. ಉದ್ದೇಶಿತ ವಿಭಜನೆಯು ಪಾಲಿಸಿದಾರರ ಸೇವಾ ವ್ಯವಸ್ಥೆಯನ್ನು ಅನಿಶ್ಚಿತತೆ ಮತ್ತು ಗೊಂದಲದಲ್ಲಿ ಕೆಡವಬಹುದು; ರಾಷ್ಟ್ರೀಯ ಮಟ್ಟದ ಸಾರ್ವಜನಿಕ ಕ್ಷೇತ್ರದ ಸಂಸ್ಥೆಯನ್ನು ಪ್ರಾದೇಶಿಕ ರೂಪದಲ್ಲಿ ವಿಭಜಿಸುವ ಮೂಲಕ ಸಂಕುಚಿತ ಪ್ರಾದೇಶಿಕ ಭಾವನೆಗಳನ್ನು ಸೃಷ್ಟಿಸಬಹುದು; ದೇಶದ ಅರ್ಥಿಕತೆಗೆ ದೊಡ್ಡ ಕೊಡುಗೆಯನ್ನು ನೀಡುತ್ತಿರುವ ಇಂದಿನ ವ್ಯವಸ್ಥೆಯನ್ನು ಬದಲಾಯಿಸಬೇಕಾದ ಯಾವುದೇ ಅಗತ್ಯವೂ ಇಲ್ಲವೆಂದು ಈ ಸಭೆಯು ಸ್ಪಷ್ಟವಾಗಿ ಅಭಿಪ್ರಾಯ ಪಡುತ್ತದೆ.

ಕೈಗಾರಿಕಾ ಸಂಬಂಧಗಳ ಕಾನೂನು ಮತ್ತು ಇತರ ಕಾರ್ಮಿಕ ಕಲ್ಯಾಣ ಕಾನೂನುಗಳ ವ್ಯಾಪ್ತಿಯಿಂದ ಎಲ್ಲೈಸಿ ನೌಕರರನ್ನು ಪ್ರತ್ಯೇಕಿಸುವ ಮೂಲಕ, ಕಾರ್ಮಿಕರು ಹಲವಾರು ದಶಕಗಳ ತ್ಯಾಗ ಬಲಿದಾನಗಳಿಂದ ಗಳಿಸಿದ ಹಕ್ಕುಗಳನ್ನು ಈ ಮಸೂದೆಯು ಕಿತ್ತುಕೊಳ್ಳಬಯಸುತ್ತದೆ ಎಲ್ಲೈಸಿ ನೌಕರರ ರಾಜಕೀಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಈ ಮಸೂದೆಯು ದಾಳಿ ಮಾಡುತ್ತದೆ.

ಕಾರ್ಮಿಕರ ಸಂಘಟಿತ ಶಕ್ತಿಯನ್ನು ಮುರಿಯಲು ಮತ್ತು ಅವರ ಹಕ್ಕುಗಳನ್ನು ಕಸಿದು ಕೊಳ್ಳಲು ನಡೆಯುತ್ತಿರುವ ಪ್ರಯತ್ನಗಳು ಎಲ್ಲೈಸಿ ನೌಕರರಿಗೆ ಸೀಮಿತವಾಗಿ ಉಳಿಯಲಾರದೆಂದೂ ಈ ದಾಳಿಯನ್ನು ಪ್ರಬಲವಾಗಿ ವಿರೋಧಿಸಿ ಸೋಲಿಸದಿದ್ದರೆ ಮುಂದೆ ಇತರ ಕಾರ್ಮಿಕರ ಮೇಲೆ ಕೂಡಾ ಇದೇ ರೀತಿಯ ದಾಳಿಗಳು ಬರಬಹುದೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. ಈ ಕಾರ್ಮಿಕ ವಿರೋಧಿ ಮತ್ತು ಜನ ವಿರೋಧಿ ಮಸೂದೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಈ ಸಭೆಯು ಒತ್ತಾಯಿಸುತ್ತದೆ ಮತ್ತು ಎಲ್ಲಾ ವಿಭಾಗಗಳ ಕಾರ್ಮಿಕರೂ ಈ ಮಸೂದೆಯನ್ನು ಪ್ರಬಲವಾಗಿ ವಿರೋಧಿಸಬೇಕೆಂದು ಈ ಸಭೆಯು ಕರೆನೀಡುತ್ತದೆ.

ನಿರುದ್ಯೋಗವನ್ನು ಕುರಿತು

ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ನಿರಂತರವಾಗಿ ಹೆಚ್ಚುತ್ತಿರುವ ಕುರಿತು ಈ ಸಭೆಯು ತೀವ್ರ ಕಳವಳ ವ್ಯಕ್ತಪಡಿಸುತ್ತದೆ.

ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳ ಪ್ರಕಾರ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ 24 ಮಿಲಿಯಗಳನ್ನು ದಾಟಿದೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುನೊಂದಾಯಿಸದೆ ಇರುವ ಗ್ರಾಮಾಂತರ ಪ್ರದೇಶಗಳ ನಿರುದ್ಯೋಗಿಗಳನ್ನು ಸೇರಿಸಿದರೆ ದೇಶದಲ್ಲಿ 5 ಕೋಟಿಗೂ ಹೆಚ್ಚು ನಿರುದ್ಯೋಗಿಗಳಿದ್ದಾರೆಂದು ಅಂದಾಜಿಸಲಾಗಿದೆ.

ಕೇಂದ್ರದ ಕಾಂಗ್ರೆಸ್ (ಐ) ಸರಕಾರವು ಅನುಸರಿಸುತ್ತಿರುವ ಬಂಡವಾಳಶಾಹಿ ಧೋರಣೆ, ದೇಶದ ಮತ್ತು ವಿದೇಶಿ ಗುತ್ತೇದಾರಿ ಬಂಡವಾಳ ಶಾಹಿಗಳ ಮೇಲೆ ಅವಲಂಬನೆ ಮತ್ತು ಪಾಳೇಗಾರಿ ಭೂ ಸಂಬಂಧಗಳನ್ನು ನಿರುದ್ಯೋಗ ಸಮಸ್ಯೆಯ ಮೂಲ ಕಾರಣಗಳು ಇಂದಿನ ವ್ಯವಸ್ಥೆಯ ಚೌಕಟ್ಟಿನಲ್ಲಿ ನಿರುದ್ಯೋಗ ಸಮಸ್ಯೆಯ ಸಂಪೂರ್ಣ ನಿವಾರಣೆ ಸಾಧ್ಯವಾಗಲಾರದಾದರೂ ಕೇಂದ್ರ ಸರಕಾರದ ಈಗಿನ ಆರ್ಥಿಕ ಧೋರಣೆಗಳಲ್ಲಿ ಬದಲಾವಣೆಗಳನ್ನು ತರುವ ಮೂಲಕ ಈ ಸಮಸ್ಯೆಯ ತೀವ್ರತೆಯನ್ನು ಕಡಿಮೆ ಮಾಡಲು ಸಾಧ್ಯವಿದೆಯೆಂದು ಈ ಸಭೆಯು ಸ್ಪಷ್ಟವಾಗಿ ಅಭಿಪ್ರಾಯ ಪಡುತ್ತದೆ. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ.

1. ಕೆಲಸದ ಹಕ್ಕನ್ನು ಮೂಲಭೂತ ಹಕ್ಕೆಂದು ಸಂವಿಧಾನದಲ್ಲಿ ಸೇರಿಸಬೇಕು.

2. ನಗರಗಳ ಹಾಗೂ ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಮತ್ತು ಉದ್ಯೋಗ ಸಿಗುವ ತನಕ ನಿರುದ್ಯೋಗ ಪರಿಹಾರ ಭತ್ತೆ ಕೊಡುವ ಜವಾಬ್ದಾರಿಯನ್ನು ಕೇಂದ್ರ ಸರಕಾರವು ವಹಿಸಿಕೊಳ್ಳಬೇಕು.

3. ಎಲ್ಲಾ ಕೈಗಾರಿಕಾ ಘಟಕಗಳಲ್ಲೂ ಅವುಗಳ ಪೂರ್ತಿ ಸಾಮರ್ಥ್ಯವನ್ನು ಉಪಯೋಗಿಸಬೇಕು.

4 ಕಿರು ಕೈಗಾರಿಕೆಗಳು ಮತ್ತು ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಹಾಯ ಮತ್ತು ಕಡಿಮೆ ಬಡ್ಡಿಯ ಸಾಲ ಕೊಡಬೇಕು.

5 ಎಲ್ಲಾ ನಿರುದ್ಯೋಗಿಗಳ ಕಡ್ಡಾಯ ರಿಜಿಸ್ಟ್ರೇಶನ್‌ಗೆ ವ್ಯವಸ್ಥೆ ಮಾಡಬೇಕು.

6. ರಿಜಿಸ್ಟ್ರೇಶನಿನ ದಿನಾಂಕದ ಆದ್ಯತೆಯ ಆಧಾರದಲ್ಲಿ ಕೆಲಸ ಕೊಡುವುದನ್ನು ಕಡ್ಡಾಯ ಗೊಳಿಸಬೇಕು.

ಆಳುವ ವರ್ಗಗಳು ಸಂಘಟಿತ ಕಾರ್ಮಿಕರ ಹೋರಾಟಗಳನ್ನು ತಮ್ಮ ಸಾಧನಗಳನ್ನಾಗಿ ಉಪಯೋಗಿಸುತ್ತಾರೆಂಬುದನ್ನು ಕಾರ್ಮಿಕ ಸಂಘಗಳು ನೆನಪಿಡಬೇಕೆಂದು ಈ ಸಭೆಯು ಒತ್ತಿ ಹೇಳುತ್ತದೆ. ನಿರುದ್ಯೋಗಿಗಳ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಡುವ ಮೂಲಕ ಮಾತ್ರವೇ ಪ್ರತಿಗಾಮಿಗಳ ಪಿತೂರಿಗಳನ್ನು ಸೋಲಿಸಲು ಕಾರ್ಮಿಕರಿಗೆ ಸಾಧ್ಯವಾಗಬಹುದು

ಸಂಘಟಿತ ಕಾರ್ಮಿಕ ಚಳವಳಿಯು ಸಹಕಾರದೊಂದಿಗೆ ಅಸಂಘಟಿತ ಕಾರ್ಮಿಕ ಚಳವಳಿಯ ಬೇಡಿಕೆಗಳಿಗಾಗಿ ಹೋರಾಡಲು ನಿರುದ್ಯೋಗಿಗಳಿಗೆ ಈ ಸಭೆಯು ಕರೆ ನೀಡುತ್ತದೆ. ದೇಶದ ಕಾರ್ಮಿಕ ಚಳವಳಿಯ ಹಿತದೃಷ್ಟಿಯಿಂದ ನಿರುದ್ಯೋಗಿಗಳನ್ನು ಸಂಘಟಿಸುವ ಮತ್ತು ಪ್ರಜಾ ಪ್ರಭುತ್ವ ಚಳವಳಿಯಲ್ಲಿ ಅವರೂ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿಯನ್ನು ಎಲ್ಲಾ ಕಾರ್ಮಿಕ ಸಂಘಗಳೂ ನಿರ್ವಹಿಸಬೇಕೆಂದು ಈ ಸಭೆಯು ಕರೆ ನೀಡುತ್ತದೆ.

ಬೆಲೆ ಏರಿಕೆಯ ಕುರಿತು

1984ರ ಫೆಬ್ರವರಿ 19 ಮತ್ತು 20 ರಂದು ದಾಂಡೇಲಿಯಲ್ಲಿ ಜರುಗಿದ ಸಿ ಐ ಟಿ ಯು ಕರ್ನಾಟಕ ರಾಜ್ಯ ಮಂಡಳಿಯ ಸಭೆಯು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ಕುರಿತು ತೀವ್ರ ಕಳವಳ ವ್ಯಕ್ತ ಪಡಿಸುತ್ತದೆ. ತಾನು ಮರಳಿ ಅಧಿಕಾರಕ್ಕೆ ಬಂದರೆ ಬೆಲೆಗಳನ್ನು ಇಳಿಸುವದಾಗಿ ದೇಶದ ಜನಕೆ ಆಶ್ವಾಸನೆ ಕೊಟ್ಟು 1980 ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಅಧಿಕಾರಕ್ಕೆ ಬಂದ ನಂತರ ಬೆಲೆ ಏರಿಕೆ ಹಿಂದೆಂದೂ ಕಂಡರಿಯದಷ್ಟು ತೀವ್ರವಾಗಿದೆ. 1983 84 ರ ಕೇಂದ್ರ ಮುಂಗಡ ಪತ್ರದಲ್ಲಿ ಜನಸಾಮಾನ್ಯರ ಮೇಲೆ ವಿಪರೀತ ತೆರಿಗೆಗಳನ್ನು ಹೇರಿ ಬಜೆಟ್ ಅಧಿವೇಶನಕ್ಕೆ ಮೊದಲೇ ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಸಿ ಅಗಾಧ ಪ್ರಮಾಣದ ಕೊರತೆಯನ್ನು (ಡಿ ಫಿ ಸಿ ಟ್ ಫಿನಾನ್ಸಿಂಗ್) ನಿರ್ಮಿಸಿದುದರಿಂದಾಗಿ ಕಳೆದ ಕೆಲವು ತಿಂಗಳುಗಳಲ್ಲಿ ಹಣದುಬ್ಬರವು ಹೆಚ್ಚಾಗಿ ಬೆಲೆಗಳು ಗಗನಕ್ಕೇರುತ್ತಿವೆ. ಕಾರ್ಮಿಕ ವರ್ಗವನ್ನು, ಕೃಷಿ ಕಾರ್ಮಿಕರನ್ನೂ ಜನಸಾಮಾನ್ಯರನ್ನೂ ಹೆಚ್ಚು ಹೆಚ್ಚಾಗಿ ದಾರಿದ್ರ್ಯದ ದವಡೆಗೆ ನೂಕುತ್ತಿರುವ ಕೇಂದ್ರ ಸರಕಾರದ ಆರ್ಥಿಕ ನೀತಿಯನ್ನು ಈ ಸಭೆಯು ಉಗ್ರವಾಗಿ ಖಂಡಿಸುತ್ತದೆ.

ಬೆಲೆ ಏರಿಕೆಯನ್ನು ತಡೆಗಟ್ಟಿ ಜನಸಾಮಾನ್ಯರಿಗೆ ಜೀವನಾವಶ್ಯಕ ವಸ್ತುಗಳು ಕಡಿಮೆ ಬೆಲೆಯಲ್ಲಿ ಸಿಗುವಂತಾಗಲು ಸರಕಾರವು ಕೂಡಲೇ ಹಳ್ಳಿ ಪಟ್ಟಣವೆಂಬ ಭೇದವಿಲ್ಲದೆ ಸಮಗ್ರ ಪಡಿತರ ಪದ್ಧತಿಯನ್ನು ಜಾರಿಗೆ ತಂದು ಅಕ್ಕಿ, ಗೋಧಿ, ಇತರ ಧಾನ್ಯಗಳನ್ನು ಖಾದ್ಯ ತೈಲ, ಸಕ್ಕರೆ, ಸಾಬೂನು, ಬಟ್ಟೆ, ಸೀಮೆ ಎಣ್ಣೆ. ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದು ಈ ಸಭೆಯು ಒತ್ತಾಯಿಸುತ್ತಿದೆ.

ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಂಡು ಮಧ್ಯವರ್ತಿಗಳ ಲಾಭ ಬಡುಕತನವನ್ನು ಕೊನೆಗೊಳಿಸಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

ಲಾಭಬಡುಕರು ಅಕ್ರಮ ದಾಸ್ತಾನು

ರೈತರ ಬೆಳೆಗಳಿಗೆ ಲಾಭದಾಯಕವಾದ ಬೆಲೆ ನಿಗದಿ ಮಾಡುವಂತೆಯೂ, ಕೃಷಿ ಸಲಕರಣೆಗಳು, ರಸಗೊಬ್ಬರ ಕೀಟನಾಶಕ, ಇತ್ಯಾದಿಗಳನ್ನು ರೈತರಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವಂತೆಯೂ ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

ಲಾಭಬಡಕರು, ಅಕ್ರಮ ದಾಸ್ತಾನುಗಾರರು, ಕಾಳಸಂತೆಕೋರರು, ಕಳ್ಳಸಾಗಾಣಿಕೆದಾರರು ಮತ್ತು ಈ ಸಮಾಜ ಘಾತಕ ಶಕ್ತಿಗಳಿಗೆ ರಕ್ಷಣೆ ನೀಡುವ ಅಧಿಕಾರಿಗಳಿಗೆ ಉಗ್ರ ಶಿಕ್ಷೆ ನೀಡಬೇಕೆಂದೂ ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

1984 ಜನವರಿ 13, 14, 15 ರಂದು ಕಲ್ಕತ್ತಾದಲ್ಲಿ 18 ಪಕ್ಷಗಳ ಮತ್ತು ವಿರೋಧ ಪಕ್ಷಗಳ ಸರಕಾರಗಳ ಐವರು ಮುಖ್ಯ ಮಂತ್ರಿಗಳೂ ಸೇರಿದ್ದ ಸಭೆಯು ಈ ಬೇಡಿಕೆಗಳನ್ನು ಸ್ವೀಕರಿಸಿ ಚಳುವಳಿಗೆ ಕರೆಕೊಟ್ಟಿರುವದನ್ನು ಈ ಸಭೆಯು ಸ್ವಾಗತಿಸುತ್ತದೆ

ಈ ಬೇಡಿಕೆಗಳಿಗಾಗಿ ಇತರ ಕಾರ್ಮಿಕ ಸಂಘಗಳು ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿ ಐಕ್ಯ ಚಳುವಳಿಯನ್ನು ನಡೆಸಬೇಕೆಂದು ಈ ಸಭೆಯು ಕರೆ ಕೊಡುತ್ತದೆ.

ಅಣು ಯುದ್ಧದ ಕುರಿತು

ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಯುದ್ಧ ಖೋರ ನೀತಿಯಿಂದಾಗಿ ಇಡೀ ಜಗತ್ತು ಇಂದು ಪರಮಾಣು ಯುದ್ಧದ ಬೀತಿಯನ್ನು ಎದುರಿಸುತ್ತಿದೆ ಪಶ್ಚಿಮ ಜರ್ಮನಿ, ಇಂಗ್ಲೆಂಡ್, ಇಟಲಿ, ಬೆಲ್ಜಿಯಂ ಹಾಲೆಂಡ್ ಈ ದೇಶಗಳ ಭೂ ಪ್ರದೇಶಗಳಲ್ಲಿ ಒಟ್ಟು 572 ಕ್ರೂಯಿಸ ಮತ್ತು ಪರ್ಶಿಂಗ್-2 ಕ್ಷಿಪಣಿಗಳನ್ನು ಸ್ಥಾಪಿಸಲು ಅಮೇರಿಕದ ರೀಗನ್ ಸರಕಾರವು ತೀರ್ಮಾನಿಸಿರುವುದು ಜಗತ್ತಿನ ಶಾಂತಿಪ್ರಿಯ ಜನತೆಯಲ್ಲಿ ತೀವ್ರ, ಕಳವಳವನ್ನುಂಟು ಮಾಡಿದೆ. ಹಿಂದೂ ಮಹಾಸಾಗರವನ್ನು ಶಾಂತವಲಯವನ್ನಾಗಿ ಉಳಿಸಿಕೊಳ್ಳಬೇಕೆಂಬ ಇಡೀ ಪ್ರಪಂಚದ ಶಾಂತಿಪ್ರಿಯ ಜನತೆಯ ಒತ್ತಾಯವನ್ನು ಧಿಕ್ಕರಿಸಿ ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಡೀಗೋಗಾರ್ಸಿಯ ದ್ವೀಪದಲ್ಲಿ, ಶ್ರೀಲಂಕಾದ ಟ್ರಿಂಕೋಮಾಲಿಯಲ್ಲೂ ಸೈನಿಕ ನೆಲೆಗಳನ್ನು ಸ್ಥಾಪಿಸಿ ಈ ಪ್ರದೇಶದ ರಾಷ್ಟ್ರಗಳ ಭದ್ರತೆಗೆ ತೀವ್ರ ಅಪಾಯದ ಬೆದರಿಕೆಯನ್ನು ಒಡ್ಡಿದ್ದಾರೆ ಅಮೇರಿಕನ್ ಸರಕಾರವು ಪಾಕಿಸ್ತಾನದ ಮಿಲಿಟರಿ ಆಡಳಿತಕ್ಕೆ ಎಫ್-16 ಯುದ್ಧ ವಿಮಾನಗಳನ್ನೂ ಹಾರ್ಪೂನ್ ಕ್ಷಿಪಣಿಗಳನ್ನೂ ಇತರ ಅಧುನಿಕ ಶಸ್ತ್ರಾಸ್ತ್ರಗಳನ್ನೂ ದೊಡ್ಡ ಪ್ರಮಾಣದಲ್ಲಿ ಸರಬರಾಜು ಮಾಡುವುದರೊಂದಿಗೆ ಯುದ್ಧದ ಭೀತಿಯು ಭಾರತದ ಬಾಗಿಲಿಗೇ ಬಂದಿದೆ.

(7ನೇ ಪುಟ ನೋಡಿ)

—ಶಿವರಾಂ

ಕಲ್ಲಿಕೋಟೆಯಲ್ಲಿ ಡಿ. ವೈ. ಎಫ್. ಐ. ಎರಡನೇ ರಾಷ್ಟ್ರ ಸಮ್ಮೇಳನ

ಭೋರ್ಗರೆದ ಯುವಜನ ಪ್ರವಾಹ

ರಾಷ್ಟ್ರದಲ್ಲಿ ಹೋರಾಟದ ಮುಂಚೂಣಿಯಲ್ಲಿರುವ ಡಿ. ವೈ. ಎಫ್. ಐ. ಎರಡನೇ ರಾಷ್ಟ್ರ ಸಮ್ಮೇಳನವು ಕೇರಳದ ಕಲ್ಲಿಕೋಟೆಯಲ್ಲಿ 84 ಫೆಬ್ರವರಿ 16 ರಿಂದ 19 ರ ವರೆಗೆ ನಡೆಯಿತು.

1981 ನವೆಂಬರ್ ಲೂಧಿಯಾನ ಸಮ್ಮೇಳನದಿಂದ ಇಲ್ಲಿಯ ವರೆಗೆ ಜಾತೀಯ, ಮತೀಯ, ಹಾಗೂ ಸಾಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಡಿ ರಾಷ್ಟ್ರದ ಸಮಗ್ರತೆಗಾಗಿ ಡಿ. ವೈ. ಎಫ್. ಐ ಧ್ವಜವನ್ನು ಎತ್ತಿ ಹಿಡಿದು ಸಾವನ್ನಪ್ಪಿದ 209 ಧೀರ ಸಂಗಾತಿಗಳಿಗಾಗಿ, ಸಮುದ್ರ ತೀರದಲ್ಲಿ ನಿರ್ಮಿಸಲಾಗಿದ್ದ ಪಿರಮಿಡ್‌ವರೆಗೆ 30 ಲಕ್ಷ ಸದಸ್ಯರನ್ನು ಪ್ರತಿನಿಧಿಸಿ ಬಂದಿದ್ದ 700 ಪ್ರತಿನಿಧಿಗಳು ಮೆರವಣಿಗೆಯಲ್ಲಿ ಹೋಗಿ ಕೆಂಪು ಹೂ ದಳಗಳನ್ನು ಅರ್ಪಿಸುವುದರೊಂದಿಗೆ ಸಮ್ಮೇಳನದ ಕಾರ್ಯಕಲಾಪಗಳು ಪ್ರಾರಂಭವಾದುವು.

ಡಿ. ವೈ. ಎಫ್. ಐ. ನ ಅಧ್ಯಕ್ಷರಾದ ಕಾಂll ಇ. ಪಿ. ಜಯರಾಜನ್ ಅವರು ಧ್ವಜಾರೋಹಣ ಮಾಡಿದರು ಕಾ। ಹಸನ್ ಮುಲ್ಲಾ ಅವರು ಸಮ್ಮೇಳನಕ್ಕೆ ವಿಶೇಷವಾಗಿ ಬಂದಿದ್ದ ಸಿ. ಪಿ ಐ. (ಎಂ) ನ ಪಾಲಿಟ್ ಬ್ಯೂರೋ ಸದಸ್ಯರಾದ ಕಾ। ಬಸವಪುನ್ನಯ್ಯ ಹಾಗೂ ಪ್ರತಿನಿಧಿಗಳನ್ನು ಆಹ್ವಾನಿಸಿದರು.

ಸ್ವಾಗತ ಸಮಿತಿಯ ಪರವಾಗಿ ಅಧ್ಯಕ್ಷ ಮತ್ತು ಸಂಸತ್ ಸದಸ್ಯರಾದ ಕಾಂ। ಚಾತುನ್ನಿ ಮಾಸ್ಟರ್ ಅವರು ಸ್ವಾಗತಿಸಿ ಮಾತನಾಡುತ್ತ, ಉತ್ತರ ಭಾರತ ರಾಷ್ಟ್ರಕ್ಕೆ ಮೊದಲ ಪ್ರಧಾನಿಯ ಕೊಡುಗೆ ಮಾಡಿದ್ದರೆ ಸಂಸತ್ತಿನಲ್ಲಿ ಕಾಂ। ಎ. ಕೆ. ಜಿ. ಅವರನ್ನು ವಿರೋಧಿ ಮುಖಂಡರನ್ನಾಗಿ ನೀಡಿದೆ. ಹಾಗೂ ಜಗತ್ತಿನಲ್ಲಿ ಮೊದಲ ಬಾರಿಗೆ ಮತದಾನದ ಮೂಲಕ ಕಮ್ಯೂನಿಸ್ಟ್ ಮಂತ್ರಿ ಮಂಡಲವನ್ನು ನೀಡಿರುವ ಹೆಮ್ಮೆ ಕೇರಳಕ್ಕಿದೆ ಎಂದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಖ್ಯಾತ ಇತಿಹಾಸಕಾರ, ಭಾರತ ಇತಿಹಾಸ ಸಂಶೋಧನಾ ಮಂಡಳಿಯ ಹಿಂದಿನ ಅಧ್ಯಕ್ಷ ಅಲಿಘರ್ ಮುಸ್ಲಿಂ ಯೂನಿವರ್ಸಿಟಿಯ ಪ್ರಾಧ್ಯಾಪಕ ಶ್ರೀ ಇರ್ಫಾನ್ ಹಬೀಬ್ ಅವರು ಅಮ್ರ ಬಂಗಾಳಿ, ತ್ರಿಪುರಾ ಉಪಜಾತಿ ಸಮಿತಿ, ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್, ಆಲ್ ಅಸ್ಸಾಂ ಘಣ ಸಂಗ್ರಾಂ ಪರಿಷತ್ ಹಂತಹ ರಾಷ್ಟ್ರ ಛಿದ್ರಕಾರಿ ಶಕ್ತಿಗಳ ವಿರುದ್ಧ, ಪ್ರಜಾಶಕ್ತಿಗಾಗಿ, ಜಾತ್ಯತೀತಕೆಗಾಗಿ ಯುವ ಜನರ ಸರ್ವತೋಭಿವೃದ್ಧಿಗಾಗಿ ಪಣ ತೊಟ್ಟು ಹೋರಾಡುತ್ತಿರುವ ಡಿ. ವೈ. ಎಫ್. ಐ ಸಮರಧೀರ ಸಂಘಟನೆಯಾಗಿದೆ ಎಂದು ಹೇಳುತ್ತ ಭವಿಷ್ಯದಲ್ಲಿ ಕೋಟಿ ಸಂಖ್ಯೆಯಲ್ಲಿ ಬೆಳೆದು ರಾಷ್ಟ್ರ ವ್ಯಾಪಿಯಾಗಬೇಕೆಂದು ಆಶಿಸಿದರು

ಕಮ್ಯೂನಿಸಂನ ಸ್ಥಾಪನೆಗಾಗಿ, ಜಾಗತಿಕ ಶಾಂತಿಗಾಗಿ ದುಡಿದಿರುವ ಸಿಪಿಐ (ಎಂ) ನ ಮುಖಂಡರಾದ ಕಾ। ಬಾಲಸುಬ್ರಮಣ್ಯಂ, ಜ್ಯೋತಿರ್ಮಯಿ ಬಸು, ಪ್ರಮೋದ್ ದಾಸ್ ಗುಪ್ತ, ವೆಂಕಟರಾಂ, ಜಯಪಾಲ್ ಸಿಂಗ್, ದೇಸರಾಜ್ ಚಡ್ಡ, ಹಾಗೂ ಎಲ್. ಐ ಬ್ರೆಜ್ನೇವ್, ಆ್ಯಂಡ್ರಪೋವ್ ಮುಂತಾದ ನಾಯಕರುಗಳಿಗೆ ಸಮ್ಮೇಳನವು ಶ್ರದ್ಧಾಂಜಲಿಯನ್ನರ್ಪಿಸಿತು.

ಭಾರತ ಚೀಣಾ ರಷ್ಯ ಜಿಂದಾಬಾದ್

ಸಮ್ಮೇಳನಕ್ಕೆ ಶುಭಾಶಯಗಳನ್ನು ಕೋರಲು ಬಂದಿದ್ದ ಆಲ್ ಚೈನಾ ಯೂತ್ ಫೆಡರೇಷನ್ ಹಾಗೂ ರಷ್ಯಾದ ಯುವ ಸಂಘಟನೆಯ ಕೊಮ್ಸೊಮೋಲ್‌ನ ಪ್ರತಿನಿಧಿಗಳು ಒಟ್ಟಿಗೆ ಸಮ್ಮೇಳನದ ಟ್ಯಾಗೂರ್ ಹಾಲಿಗೆ ಬಂದಾಗ ಪ್ರತಿನಿಧಿಗಳು ಎದ್ದು ನಿಂತು ಹೃದಯ ತುಂಬಿ ಒಕ್ಕೊರಲಿನಿಂದ ಕೆಂಪು ವಂದನೆಗಳನ್ನು ಸಲ್ಲಿಸಿದರು.

ಎರಡೂ ಬೃಹತ್ ಸಮಾಜವಾದಿ ರಾಷ್ಟ್ರಗಳ ಪ್ರತಿನಿಧಿಗಳು ಪರಸ್ಪರ ಮಾತನಾಡುತ್ತ ಚಹಾ ತೆಗೆದುಕೊಂಡಾಗ ತುಂಬಾ ಆಕರ್ಷಣೆಯವಾಗಿತ್ತು. ಕೊಮ್ಸೊಮೋಲ್‌ನ ಪ್ರತಿನಿಧಿ ಕಾ। ಸ್ಟಾಲಿನ್ ಅವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತ ಸೋವಿಯತ್ ನಾಡು ಜಪಾನ್ ಸಾಮ್ರಾಜ್ಯಶಾಹಿ ಹಾಗೂ ನಾಜಿ ಹಿಟ್ಲರ್‌ನ ನಾಶಪಡಿಸುವ ಹೋರಾಟದಲ್ಲಿ ತನ್ನ ಮಿಲಿಯಾವಧಿ ಸಮರಧೀರರನ್ನು ಕಳೆದುಕೊಂಡಿದೆ. ಹೋರಾಟವಿನ್ನೂ ಕೊನೆಗೊಂಡಿಲ್ಲ ಎಂದರು

ಕಮ್ಯೂನಿಸ್ಟ್ ತತ್ವಗಳನ್ನು ಜಾರಿ ಮಾಡುವುದರ ಜೊತೆಯಲ್ಲಿ ಜಾಗತಿಕ ಶಾಂತಿಗಾಗಿ ಅಮೇರಿಕನ್ ಯುದ್ಧಖೋರರ ವಿರುದ್ಧ ಇದುವರೆವಿಗೆ ಮಿಲಿಯಾವಧಿ ಜನತೆಯನ್ನು ಸಾಮೂಹಿಕ ಚಳುವಳಿಗಳತ್ತ ದಿನೇ ಸೆಳೆಯುತ್ತಿದೆ ಎಂದು ಹೇಳಿ 1985 ರಲ್ಲಿ ಮಾಸ್ಕೋದಲ್ಲಿ ನಡೆಯಲಿರುವ 12 ನೇ ಯುವಮೇಳಕ್ಕೆ ಡಿ ವೈ ಎಫ್. ಐ ನ್ನು ಆಹ್ವಾನಿಸಿದರು.

ಆಲ್ ಚೈನಾ ಯೂತ್ ಫೆಡರೇಷನ್‌ನ ಪ್ರತಿನಿಧಿ ಯಂಗ್ ಲೀ ಅವರು ಶುಭಕೋರಿ ಮಾತನಾಡುತ್ತ ಭಾರತ ಚೀಣ ರಾಷ್ಟ್ರಗಳ ಸಂಬಂಧ ಶತಶತ ಮಾನಗಳಿಂದ ಬೆಳೆದು ಬಂದಿರುವುದಾಗಿಯೂ ಅದು ಮುಂದುವರಿಯುವುದೆಂದು ಹೇಳಿ ಡಿ ವೈ ಎಫ್. ಐ. ಭಾರತದ ಯುವ ಜನರನ್ನು ಒಗ್ಗೂಡಿಸಿ ಜಾಗತಿಕ ಶಾಂತಿಗಾಗಿಯೂ, ಸಾಮ್ರಾಜ್ಯಶಾಹಿಗಳ, ಗುತ್ತಿಗೆದಾರರ ವಿರುದ್ಧ ನಿರ್ಣಯಕ ಪಾತ್ರ ವಹಿಸಿದೆ ಎಂದು ಹೇಳಿ ಇದೇ ವರ್ಷ ಡಿ. ವೈ. ಎಫ್. ಐ ಪ್ರತಿನಿಧಿಗಳನ್ನು ಚೀಣಕ್ಕೆ ಆಹ್ವಾನಿಸಿ ಸೌಹಾರ್ದ ಮಾತುಕತೆ ನಡೆಸಲಿದ್ದೇವೆ ಎಂದು ಘೋಷಿಸಿದರು. ಉತ್ತರ ಕೋರಿಯ ಪೂರ್ವ ಜರ್ಮನಿಯ ಯುವ ಸಂಘಟನೆಗಳಿಂದ ಶುಭಾಶಯಗಳು ಬಂದಿದ್ದವು.

ಕಾಂ। ಇ. ಕೆ. ನಾಯನಾರ್, ಅಖಿಲ ಭಾರತ ಮಹಿಳಾ ಸಂಘಟನೆಯ ಪರವಾಗಿ ಕಾಂll ಸುಶೀಲ ಗೋಪಾಲನ್ ಸಿಐಟಿಯು ಎಸ್. ಎಫ್ ಐ, ಕಿಸಾನ್ ಸಭಾ ಹಾಗೂ ಟೀಚರ್ಸ್ ಫೆಡರೇಷನ್ ಎನ್. ಜಿ ಓ, ಕೆ. ಎಸ್ ಆರ್. ಟಿ ಸಿ, ಕೇರಳ ರಾಜ್ಯ ಎಲೆಕ್ಟ್ರಿಸಿಟಿ ಎಂಪ್ಲಾಯೀಸ್ ಯೂನಿಯನ್, ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಮತ್ತು ಎ ಪಿ. ಯೂತ್ ಫೆಡರೇಷನ್‌ನ ನಾಯಕರುಗಳು ಶುಭಕೋರಿ ಮಾತನಾಡಿದರು

ಪ್ರಧಾನ ಕಾರ್ಯದರ್ಶಿಗಳಾದ ಕಾಂ। ಹಸನ್ ಮುಲ್ಲಾ ಅದರು ಕಳೆದ ಮೂರು ವರ್ಷಗಳ ವರದಿಯನ್ನು ಮಂಡಿಸುತ್ತ. ರಾಷ್ಟ್ರದ ಸಮಗ್ರತೆಗಾಗಿ, ಜಾತೀಯ, ಮತೀಯ ಶಕ್ತಿಗಳ ವಿರುದ್ಧ ನಿರುದ್ಯೋಗ, ಅನಕ್ಷರತೆ, ಒಡತ್ತನ ಮುಂತಾದ ಸಾಮಾಜಿಕ ರೋಗಗಳ ವಿರುದ್ಧ ಸಮರ ಸಾರಿ ಡಿ. ವೈ. ಎಫ್. ಐ. ನ ಶಾಂತಿದ್ಯೋತಕ ಬಾವುಟವನ್ನು ಎತ್ತಿ ಹಿಡಿದು ಹುತಾತ್ಮರಾದ 209 ಯುವ ಸಂಗಾತಿಗಳನ್ನು ಸ್ಮರಿಸಿ ಮುಂದಿನ 3 ನೆಯ ಸಮ್ಮೇಳನದ ಹೊತ್ತಿಗೆ, ಈಗ ಸಮ್ಮೇಳನಕ್ಕೆ ಬಂದಿರುವ ಸಂಗಾತಿಗಳಲ್ಲಿ ಎಷ್ಟು ಜನರನ್ನು ಕಳೆದು ಕೊಳ್ಳಲಿದ್ದೇವೆಯೋ ಎಂದು ದುಃಖತಪ್ತರಾಗಿ ಮಾತನಾಡಿದರು.

ಹಲವು ರಾಜ್ಯ ಸಮಿತಿಗಳು ಡಿ ವೈ. ಎಫ್. ಐ ನ್ನು ಬರೀ ಯುವಕರ ಸಂಘಟನೆ ಎಂದು ಪರಿಗಣಿಸಿ ಮಹಿಳೆಯರನ್ನು ನೊಂದಾಯಿಸುವುದರಲ್ಲಿ ವಿಫಲವಾಗಿವೆ. ಕೆಲವು ಕಡೆ ಬರೀ ನಿರುದ್ಯೋಗಿಗಳನ್ನೇ ಹುಡುಕಿಕೊಂಡು ಹೋಗುವ ಪರಿಸ್ಥಿತಿ ಇದೆ. ಇನ್ನೂ ಹಲವು ಕಡೆ ಮಾರ್ಕ್ಸ್‌ವಾದಿ ಲೆನಿನ್ ವಾದಗಳನ್ನು ಮಾತನಾಡುವವರನ್ನು ಮಾತ್ರ ನೊಂದಾಯಿಸುವ ಹವ್ಯಾಸ ಇದೆ.

ಪ್ರಜಾಸತ್ತಾತ್ಮಕ ಹೋರಾಟವನ್ನು ತನ್ನ ವೇದಿಕೆಯನ್ನಾಗಿ ಮಾಡಿಕೊಂಡಿರುವ ಡಿ. ವೈ. ಎಫ್. ಐ. ಬರೀ ನಿರುದ್ಯೋಗಿಗಳಿಗಾಗಿ, ಯುವಕರಿಗಾಗಿ, ಮಾತಿನ ಚಪಲತೆಯನ್ನು ನೀಗಿಸಿಕೊಳ್ಳಲು ಮಾರ್ಕ್ಸ್‌ವಾದ ಲೆನಿನ್ ವಾದವನ್ನು ಬಳಸುವವರಿಗಾಗಿಯಾಗಲೀ, ನಮ್ಮ ಸಂಘಟನೆಯ ಚಳುವಳಿ ಖಂಡಿತ ಮೀಸಲಾಗಿಲ್ಲ.

ಡಿ. ವೈ. ಎಫ್. ಐ. ವಿಶಾಲ ತಳಹದಿಯ ವೇದಿಕೆ. ಹದಿನೈದರಿಂದ ನಲವತ್ತು ವಯೋಮಿತಿಯ ಒಳಗೆ ಬರುವವರೆಲ್ಲ ಯುವ ಜನರೆಂದು ಡಿ ವೈ. ಎಫ್. ಐ ನಿಲುವು. ರೈತ ಕಾರ್ಮಿಕ, ಉದ್ಯೋಗಿ, ನಿರುದ್ಯೋಗಿ, ಅಕ್ಷರಸ್ಥ, ಅನಕ್ಷರಸ್ಥ, ವಿದ್ಯಾರ್ಥಿ ಯುವತಿಯರು ಮಹಿಳೆಯರನ್ನು ನಮ್ಮ ಸಂಘಟನೆ ನೊಂದಾಯಿಸಬೇಕು ಡಿ ವೈ ಎಫ್. ಐ ನ ಒಬ್ಬ ಸದಸ್ಯ ತನ್ನ ಸಹೋದರಿಯನ್ನು ಹಾಗೂ ತನ್ನ ಅರ್ಧಾಂಗಿಯನ್ನು ಸೇರಿಸ ಬೇಕು ಹಾಗಾದಾಗ 30 ಲಕ್ಷದಿಂದ ಕೇವಲ ಮುಂದಿನ ಎರಡು ತಿಂಗಳುಗಳಲ್ಲಿ 60 ಲಕ್ಷ ಸದಸ್ಯ ಬಲವುಳ್ಳ ಸಂಘಟನೆ ನಮ್ಮದಾಗುತ್ತದೆ. ಕೇರಳದ ರಾಜ್ಯ ಸಮಿತಿಯು ತನ್ನ 10 ಲಕ್ಷ ಸದಸ್ಯರಲ್ಲಿ 20 ಲಕ್ಷ 20 ಸಾವಿರ ಮಹಿಳಾ ಸದಸ್ಯೆಯರನ್ನು ಹೊಂದಿರುವುದು ಇತರರಿಗೆ ಮಾರ್ಗ ದರ್ಶನವೆಂದು ಹೇಳಿದರು.

ಅಂತರ ರಾಷ್ಟ್ರೀಯವಾಗಿ ಬಂಡವಾಳಶಾಹಿ ಹಾಗೂ ಹಿಂದುಳಿದ ರಾಷ್ಟ್ರಗಳಲ್ಲಿ ನಿರುದ್ಯೋಗ, ಅನಕ್ಷರತೆ ಭೀಕರವಾಗುತ್ತಿದೆ. ಅಮೇರಿಕನ್ ಸಾಮ್ರಾಜ್ಯ ಶಾಹಿಯು ಅಣು ಸಮರದ ಕಾರ್ಮೋಡವನ್ನು ಎಬ್ಬಿಸಿದೆ. ಎಲ್ಲೆಲ್ಲೂ ತನ್ನ ಸೈನಿಕ ನೆಲೆಯನ್ನು ಸ್ಥಾಪಿಸುತ್ತಿದೆ ಕೆಲವು ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳನ್ನು ಬಲಪಡಿಸಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕ್ರೂರವಾಗಿ ಹತ್ತಿಕ್ಕುತ್ತಿದೆ. ಒಟ್ಟಾಗಿ ಅದು ರಷ್ಯಾ ಹಾಗೂ ಸಮಾಜವಾದಿ ಮುನ್ನಡೆಯನ್ನು ನಾಶಗೊಳಿಸಲು ತನ್ನ ರಾಷ್ಟ್ರೀಯ ಉತ್ಪಾದನೆಯಲ್ಲಿ ಶೇಕಡ 50 ನ್ನು ಮಾರಕಾಸ್ತ್ರಗಳನ್ನು ತಯಾರಿಸಲು ಮೀಸಲಿಡುತ್ತಿದೆ.

ರಾಷ್ಟ್ರದಲ್ಲಿ ಸ್ವಾತಂತ್ರ್ಯ ನಂತರ ರಾಜ್ಯಗಳ ಹಕ್ಕು ಬಾಧ್ಯತೆಗಳನ್ನು ಮೊಟಕು ಗೊಳಿಸುವ ಸರ್ವಾಧಿಕಾರಿ ಕೇಂದ್ರ ಸರ್ಕಾರವಿದೆ. ಬೆಲೆ ಏರಿಕೆ ಅನಕ್ಷರತೆ, ನಿರುದ್ಯೋಗ ಕೋಟಿ ಸಂಖ್ಯೆಯಲ್ಲಿ ಬೆಳೆಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯಗಳು ಬಲಹೀನವಾಗುತ್ತಿವೆ. ಅಸ್ಸಾಂ, ಖಲಿಸ್ಥಾನ್ ಸಮಸ್ಯೆಗಳು ಇತರೆಲ್ಲಾ ರಾಜ್ಯಗಳಿಗೂ ಹರಡುವುದರಲ್ಲಿ ಏನೇನೂ ಸಂಶಯವಿರುವ ಸಂಭವವಿಲ್ಲ. ನಮ್ಮ ಕಣ್ಣು ಮುಂದೆಯೇ ನೂರಾರು ರೀತಿಯ ಸಾಮಾಜಿಕ ಅನಿಷ್ಟಗಳು ಘಟಿಸುತ್ತಿರುವ ಸಂದರ್ಭದಲ್ಲಿಯೇ ನಮ್ಮಲ್ಲಿನ ಕೆಲವು ಸಂಗಾತಿಗಳು ಅವುಗಳಿಗೆ ನೇರವಾಗಿ ಸ್ಪಂದಿಸದೆ ನಾಲ್ಕು ಗೋಡೆಗಳ ಮಧ್ಯೆ ದಿನವಿಡೀ, ವರ್ಷವಿಡೀ ಕೂತು ಅಧ್ಯಯನದಲ್ಲಿ ನಿರತವಾಗಿರುತ್ತಾರೆ. ಅವರ ಹಿಂದೆ ಸಂಖ್ಯ ಬಲವಿಲ್ಲ ಜನರ ಪರಿಚಯವಿಲ್ಲ. ಒಂದು ಸಮಿತಿ, ಸಾಮೂಹಿಕ ನಾಯಕತ್ವ ಮುಂತಾಗಿ ಇರುವುದಿಲ್ಲ. ಅಂದ ಮೇಲೆ ಅವರು ಅಧ್ಯಯನ ಮಾಡಿದ್ದು ಏನು ? ಯಾಕೆ ? ಇದು ಡಿ. ವೈ. ಎಫ್. ಐ. ಚಳುವಳಿ ಅಲ್ಲ ಮಾತ್ರವಲ್ಲ ವಿರೋಧ ಕೂಡ ಎಂದು ಹಸನ್ ಹೇಳಿದರು.

ಐದು ಸಾವಿರ ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ ಬಂದಿದ್ದ 633 ಸದಸ್ಯರನ್ನು ಪ್ರತಿನಿಧಿಸಿ ನಲವತ್ತು ಪ್ರತಿನಿಧಿಗಳು 650 ನಿಮಿಷಗಳಲ್ಲಿ ವರದಿಯ ಮೇಲೆ ಭಾಗವಹಿಸಿ ಮಾತನಾಡಿದರು.

ರಾಷ್ಟ್ರದ ಎಲ್ಲಾ ರಾಜ್ಯಗಳೂ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಕೇಂದ್ರ ಸಮಿತಿಯು ಮಂಡಿಸಿದ ವರದಿಯನ್ನು ಚರ್ಚೆ ಮಾಡಿದ್ದಲ್ಲದೆ ವರದಿಯನ್ನು ಒಕ್ಕೊರಲಿನಿಂದ ಒಪ್ಪಿಕೊಂಡರು.

ನಿರ್ಣಯಗಳು

ಸ್ವಾತಂತ್ರ್ಯ ಹೋರಾಟಗಾರರಾದ ಅರ್ಜೆಂಟೈನಾದ ಕಾ। ಗ್ಯಾಭೋರ್ ಬ್ರೆಜಿಲ್‌ನ ಕಾ॥ ರೋಜ್, ದಕ್ಷಿಣ ಆಫ್ರಿಕಾದ ನಿಷೇದಿತ ಕಮ್ಯೂನಿಸ್ಟ್ ಅಧ್ಯಕ್ಷ ಯೂಸುಫ್ ಮಹಮದ್, ಏ. ಎನ್. ಸಿ. ಯ ಹೋರಾಟಗಾರರಾದ ಜೆರ್ರಿ, ಮೂಸೋಲಿಲಿ, ಸೈಮನ್ ಮೊಗಾರೋಯನ್, ಮಾರ್ಕಸ್ ಮಾತುಂಗ್, ಹಾಗೂ ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಹಾಗೂ ಏಶಿಯಾ ರಾಷ್ಟ್ರಗಳಲ್ಲಿ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಕಪ್ಪು ನೆರಳಿನ ವಿರುದ್ಧ ದಂಗೆಯೆದ್ದು ಹುತಾತ್ಮರಾಗಿರುವ ಯಿಲಿಯಾ ಮದಿ ಹುತಾತ್ಮರಿಗೆ ಶ್ರದ್ಧಾಂಜಲಿಯ ನಿರ್ಣಯವನ್ನು ಸ್ವೀಕರಿಸಲಾಗಿದ.

ರಾಷ್ಟ್ರೀಯ ಸಮಗ್ರತೆಗಾಗಿ, ಜಾತೀಯ ಮತೀಯ ಶಕ್ತಿಗಳ, ನಿರುದ್ಯೋಗದ, ಅನಕ್ಷರತೆಗಳ ಕುರಿತು ನಿರ್ಣಯಿಸಲಾಗಿದೆ ಕೇಂದ್ರ ಸಮಿತಿಯ ಎರಡು ಕರೆಗಳಾದ ನಿರುದ್ಯೋಗ ವಿರೋಧಿ ದಿನಾಚರಣೆ ಮಾರ್ಚ್-28, ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ ಸೆಪ್ಟೆಂಬರ್-15, ಅಲ್ಲದೆ ಶಾಂತಿಗಾಗಿ ಮುನ್ನಡೆ. ಸಮಗ್ರತೆಗಾಗಿ ಮುನ್ನಡೆ ಎಂಬ ಮತ್ತೊಂದು ಘೋಷಣೆಯನ್ನು ಸ್ವೀಕರಿಸಲಾಗಿದೆ. ನೇಪಾಳಿ ಭಾಷೆಯನ್ನು 8ನೇ ವಿಧಿಯಲ್ಲಿ ಸೇರಿಸಬೇಕೆಂದು ಸಹ ನಿರ್ಣಯಿಸಲಾಗಿದೆ.

ಹೊಸ ಕೇಂದ್ರ ಸಮಿತಿ

ಕೇಂದ್ರ ಸಮಿತಿಯಲ್ಲಿ 67 ಜನ ಸದಸ್ಯರಿರುತ್ತಾರೆ. ಅದರಲ್ಲಿ ಹದಿಮೂರು ಜನ ಪದಾಧಿಕಾರಿಗಳು ಅಧ್ಯಕ್ಷರಾಗಿ ಕಾಂ ವಿಜಯಕುಮಾರ್, ಕೇರಳ, ಉಪಾಧ್ಯಕ್ಷರುಗಳಾಗಿ ಇ ಪಿ.

(7ನೇ ಪುಟ ನೋಡಿ)

ದರಖಾಸ್ತುದಾರರ, ವಸತಿ ಹೀನರ ಸಮ್ಮೇಳನ

22-2-84 ರಂದು ಚಿಕ್ಕಬಳ್ಳಾಪುರದ ಪುರ ಭವನದಲ್ಲಿ ದರಖಾಸ್ತುದಾರರ ಮತ್ತು ವಸತಿ ಹೀನರ ಸಮ್ಮೇಳನ ನಡೆಯಿತು ಈ ಸಮ್ಮೇಳನದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಲಕ್ಷ್ಮಯ್ಯನವರು ವಹಿಸಿದ್ದರು.

ಉದ್ಘಾಟನೆಯನ್ನು ಶಾಸಕರಾದ ಅಪ್ಪಸ್ವಾಮಿ ರೆಡ್ಡಿ ಮಾಡಿದರು.

ಊರಿನ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆದು "ದರಖಾಸ್ತುದಾರರಿಗೆ ಭೂಮಿ ಪಟ್ಟ ಕೊಡಿ." ಮನೆ ಇಲ್ಲದವರಿಗೆ ಮನೆ ಕಟ್ಟಿಸಿ ಕೊಡಿ ಎಂದು ಘೋಷಣೆಗಳನ್ನು ಕೂಗುತ್ತಾ ಕೆಂಪು ಬಾವುಟಗಳನ್ನು ಹಿಡಿದ ಮಹಿಳೆಯರು, ಯುವಕರೂ ನಡೆದು ಬರುತ್ತಿದ್ದನ್ನು ನೋಡಿ ನಗರವು ಕಿಕ್ಕಿರಿದ ಜನರಿಂದ ತುಂಬಿತ್ತು.

ಕಾ. ಅಪ್ಪಸ್ವಾಮಿ ರೆಡ್ಡಿ ಯವರು ಉದ್ಘಾಟನೆ ಭಾಷಣ ಮಾಡುತ್ತಾ ದುರ್ಬಲ ವರ್ಗದವರು ಮತ್ತು ಹಿಂದುಳಿದ ಜನತೆ ಈ ದಿನ ಮನೆ ಮಠ, ಉಳುವುದಕ್ಕೆ ಭೂಮಿ, ಇಲ್ಲದೆ ನರಳುತ್ತಿರುವುದಕ್ಕೆ ಕಾಂಗ್ರೆಸ್ಸೇ ಕಾರಣವೆಂದು ತಿಳಿಸಿ ಈ ವರ್ಗದ ಜನ ಒಂದಾಗಿ ಹೋರಾಟ ಮಾಡಲು ತಿಳಿಸಿದರು.

ರೈತ ಮುಖಂಡರಾದ ಜಗನ್ನಾಥ್ ರವರು ಮಾತನಾಡಿ, ಸ್ವತಂತ್ರ ಬಂದು 36 ವರ್ಷಗಳಾದರೂ ಬಡವರಿಗೆ ಇರಲು ಮನೆ, ಉಳಲು ಬಡ ರೈತರಿಗೆ ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲದೆ ಜೀವನ ದುರ್ಬರವಾಗುತ್ತಿರುವುದನ್ನು ವಿವರಿಸಿ ದುಡಿಯುವ ವರ್ಗಗಳೆಲ್ಲಾ ಒಂದಾಗಿ. ಜಿಲ್ಲೆಯಲ್ಲಿ ಇಂತಹ ಸಮ್ಮೇಳನಗಳನ್ನು ಮಾಡಬೇಕೆಂದು ತಿಳಿಸಿದರು. ಅದ್ಯಕ್ಷತೆ ವಹಿಸಿದ್ದ ಕಾ॥ ಎಸ್. ಲಕ್ಷ್ಮಯ್ಯ ನವರು ಮಾತನಾಡುತ್ತಾ ಈಗ ಬಡ ರೈತರು ಉಳುತ್ತಿರುವ ಜಮೀನುಗಳನ್ನು ಬಿಡದೆ, ಈಗ ಸ್ವಾಧೀನದಲ್ಲಿರುವ ಜಮೀನುಗಳನ್ನು ಬಿಡದೆ, ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಮನೆಗಳನ್ನು ತಮಗೇ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ತಿಳಿಸಿದರು. ಮೆರವಣಿಗೆಯ ನಾಯಕತ್ವ ಕಾ॥ ಕೃಷ್ಣಪ್ಪ ಕಾ॥ ಶಿವಪ್ಪ ಕೆ. ಎಮ್. ಮುನಿಶಾಮಿ, ಮೊದಲಾದವರು ವಹಿಸಿದ್ದರು ಸ್ವಾಗತವನ್ನು ಕಾ॥ ಎಚ್. ಎಸ್. ಸತ್ಯನಾರಯಣ ರಾವ್ ರವರು ಮಾಡಿದರು. ಕಾ। ಎಮ್. ರಾಮಯ್ಯ ನವರು ವಂದಿಸಿದರು.

ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸಲಾಯಿತು.

ಶಾಂತಿ ದಿನಾಚರಣೆ

ತಾ॥ 6-2-84 ರಂದು ಕೋಲಾರದಲ್ಲಿ ಶಾಂತಿದಿನಾಚರಣೆಯನ್ನು ನಡೆಸಲಾಯಿತು. ಶಾಂತಿ ಮೆರವಣಿಗೆಗೆ, ಕೆ. ಜಿ. ಎಫ್. ನ ಗಣಿ ಕಾರ್ಮಿಕರು, ಚಿಕ್ಕ ಬಳ್ಳಾಪುರದ ರೈತರು ಮತ್ತು ಕಾರ್ಮಿಕರು, ಬಾಗೇಪಲ್ಲಿಯಿಂದ ರೈತರು, ಕೋಲಾರದ ಬೀಡಿ ಕಾರ್ಮಿಕರು ಮತ್ತು ರೈತರು. ಮುಳಬಾಗಿಲಿನಿಂದ ರೈತರು ಬಂದಿದ್ದು ಊರಿನ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆಯು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ನಡೆಯಿತು ಬೃಹತ್ ಮೆರವಣಿಗೆ ಮುಗಿದ ಮೇಲೆ ಗಾಂಧಿ ಪಾರ್ಕ್‌ನಲ್ಲಿ ಬಹಿರಂಗ ಸಭೆಯು ಕಾ॥ ಎಸ್. ಲಕ್ಷ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾ॥ ಮಜೀದ್ ರವರು ಸ್ವಾಗತ ಮಾಡಿದರು.

ಕಾ॥ ಮಣಿ, ಕಾ॥ ಸವೇದಾಸ್, ಕಾ॥ ಕೃಷ್ಣಮೂರ್ತಿಯವರು ಯುದ್ಧಕೋರ ರೀಗನ್‌ರನ್ನು ಖಂಡಿಸಿದ್ದೇ ಅಲ್ಲದೆ ಪ್ರಪಂಚದಲ್ಲಿ ಸಮಾಜವಾದವನ್ನು ಉಳಿಸಿಕೊಳ್ಳಲು ಮತ್ತು ಶಾಂತಿಯನ್ನು ಕಾಪಾಡಲು; ರೈತರು, ಕಾರ್ಮಿಕರು, ಬುದ್ಧಿ ಜೀವಿಗಳನ್ನು ಒಂದಾಗಿ ಶ್ರಮಿಸಲು ಕೋರಿದರು.

ಭೋರ್ಗರೆದ ಯುವ ಜನ ಪ್ರವಾಹ

(6 ನೇ ಪುಟದಿಂದ)

ಜಯರಾಜನ್, ನನ್‌ಪೂರನ್, ಮಾಣಿಕ್ ಸರ್ಕಾರ್, ಸೈಫುದ್ದಿನ್ ಚೌಧರಿ, ಸುನೀತ್ ಚೋಪ್ರ ಪ್ರಧಾನ ಕಾರ್ಯದರ್ಶಿ ಸಂಸತ್ ಸದಸ್ಯ ಕಾಂ ಹನನ್‌ಮುಲ್ಲಾ ಸಹಕಾರ್ಯದರ್ಶಿಗಳಾಗಿ ಬರೀನ್ ಬಸು, ಎಸ್. ಪಿ ತಿವಾರಿ, ಪಿ. ಕೆ ಎನ್. ದಾಸ್. ಮೋಹನ್ ಸಿಂಗ್, ಎಂ ಎ. ಬೇಬಿ. ಖಜಾಂಚಿಯಾಗಿ ವಿಜಯಕುಮಾರ್ ಸಾಂತ್ ಆಯ್ಕೆಯಾಗಿದ್ದಾರೆ

ಕ್ಯಾಲಿಕಟ್ ನಗರ ತುಂಬಿ ತುಳುಕಿದ ಡಿ.ವೈ ಎಫ್. ಐ ಐತಿ ಹಾಸಿಕ ಬೃಹತ್ ರ‍್ಯಾಲಿ

ಫೆಬ್ರುವರಿ 19 ಕ್ಕೆ ಮುಂಜೆಯೇ 19 ರ ರ‍್ಯಾಲಿಗೆ ಸೇರಿ ಕೊಳ್ಳಲು ಸಹಸ್ರ ಸಂಖ್ಯೆಯಲ್ಲಿ ನಗರ ಒಳಗೂ ಹೊರಗೂ ಡಿ ವೈ ಎಫ್. ಐ ನ ನೂರಾರು ಕ್ಯಾಂಪ್‌ಗಳು ಬಿಡಾರ ಹೂಡಿದ್ದುವು. ನಗರದ ತುಂಬ ಡಿ. ವೈ ಎಫ್. ಐ ನ ಲಕ್ಷೋಪಾದಿ ಐದು ಮೂಲೆಯ ನಕ್ಷತ್ರದ ಬಾವುಟಗಳೂ, ಬ್ಯಾನರುಗಳೂ ಕಟ್ ಔಟ್‌ಗಳೂ, ಕಮಾನುಗಳೂ, ಅಷ್ಟೇ ಅಲ್ಲದೆ ರಾಜ್ಯದ ತುಂಬ ಬಂಟಿಂಗ್ಸ್, ಅಂತ್ಯಂತ ಕಲಾತ್ಮಕ ವಿವಿಧ ರೀತಿಯ ಬಣ್ಣ ಬಣ್ಣದ ಗೋಡೆ ಬರಹಗಳೂ ಎತ್ತ ಕಣ್ಣು ಹಾಯಿಸಿದರೂ ಡಿ ವೈ. ಎಫ್. ಐ ಗೋಚರಿಸುತ್ತಿತ್ತು ಸಮ್ಮೇಳನದ ನಾಲ್ಕು ದಿನಗಳೂ ನಗರದೊಳಕ್ಕೆ ಮೆರವಣಿಗೆಗಳು ಬರುತ್ತಲೇ ಇದ್ದುವು ಕೊನೆಯಾದದ್ದು ಬಹಿರಂಗ ಸಭೆ ಮುಗಿದ 20 ರ ನಂತರವೆ.

19 ರಂದು ಮಧ್ಯಾಹ್ನ 3 ಕ್ಕೆ ಐದು ಲಕ್ಷ ಸಂಖ್ಯೆಯ ಕ್ಯಪಾಸಿಟಿ ಇರುವ ವೆಸ್ಟ್ ಹಿಲ್ ಗ್ರೌಂಡ್‌ನಿಂದ ಮುಖ್ಯ ಮೆರವಣಿಗೆ ಹೊರಟಿತು. ಮೆರವಣಿಗೆಯ ಮುಂದೆ ನಾಲ್ಕು ಜನ ಮಹಿಳಾ ಸಂಗಾತಿಗಳು ಬ್ಯಾನರ್ಸ್ ಹಿಡಿದುಕೊಂಡಿದ್ದರು ಅವರ ಹಿಂದೆ ಕೇಂದ್ರ ಸಮಿತಿಯ ಸದಸ್ಯರಿದ್ದರು, ಅವರ ಹಿಂದೆ ಪ್ರತಿನಿಧಿಗಳು ನಂತರ ಮೆರವಣಿಗೆ ಮೆರವಣಿಗೆಯ ಮುಂಭಾಗವನ್ನು ನೋಡಲು ಸಾಧ್ಯವಾಯಿತೇ ವಿನಹ ಕೊನೆಯನ್ನು ನೋಡಲು ಸಾಧ್ಯವಾಗದಂತ ಬೃಹತ್ ಮೆರವಣಿಗೆ ಅದಾಗಿದ್ದಿತು. ಕೆಂಪು ಸ್ವಯಂ ಸೇವಕರ ಶಿಸ್ತುಬದ್ಧ ವ್ಯವಹಾರದಲ್ಲಿ ಪೋಲೀಸರಿಗೆ ಕೆಲಸವಿರಲಿಲ್ಲ. ಅಷ್ಟೇ ಅಲ್ಲದೆ ಮಧ್ಯೆ ಯಾರೂ ಸೇರಿಕೊಳ್ಳುವಂತಿರಲಿಲ್ಲ. ಹಾಗಾಗಿ ಮೆರವಣಿಗೆಯ ಹಿಂದಿನಿಂದ ಬರಲು ಅಸಾಧ್ಯವಾಗಿ ಮೆರವಣಿಗೆಗಾಗಿ ದೂರ ದೂರ ದಿಂದ ಬಂದ ಸಹಸ್ರಾರು "ಡಿಫೀ"ಗಳು ಕಿಕ್ಕಿರಿದ ಪುಟ್ ಬಾತ್ ಮೇಲೆ ನಿಂತು ಘೋಷಣೆಗಳನ್ನು ಕೂಗಿದರು

ಬಹಿರಂಗ ಸಭೆಯು 7 ಲಕ್ಷ ಜನ ಸಂಖ್ಯೆಯನ್ನು ತುಂಬುವ ಸ್ಟೇಡಿಯಂ ತುಂಬಿದ ನಂತರ ಪೋಲೀಸರು ಮೆರವಣಿಗೆಯನ್ನು ತಡೆದರು ಘರ್ಷಣೆಯಾಗಬಹುದಾಗಿದ್ದ ಸಂದರ್ಭವನ್ನು ಗ್ರಹಿಸಿದ ಸ್ವಾಗತ ಸಮಿತಿಯ ಛೇರ್‌ಮನ್ ಕಾಂ ಚಾತುನ್ನಿ ಮಾಸ್ಟರ್ ಅವರು ಸ್ಟೇಡಿಯಂ ನಿಂದ ಎರಡು ಕಿಲೋಮೀಟರ್ ಸುತ್ತಲೂ ಮೈಕ್ ಕಟ್ಟಲಾಗಿದೆ ಮೆರವಣಿಗೆಯಲ್ಲಿರುವ ಸಂಗಾತಿಗಳು ತಾವಿರುವಲ್ಲಿಯೇ ಭಾಷಣವನ್ನು ಕೇಳಬೇಕೆಂದು ಪ್ರಕಟಿಸಿದಾಗ ಎಲ್ಲೆಲ್ಲೂ ನಿಶ್ಯಬ್ದವಾಯಿತು

ನೂತನ ಕೇಂದ್ರ ಸಮಿತಿಯ ಅಧ್ಯಕ್ಷ ಕಾಂ ವಿಜಯಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಾಂ ಹನನ್‌ಮುಲ್ಲಾ ನಿರ್ಣಯಗಳನ್ನು ಹೇಳಿದರು. ಕಾಂ ಬಸವಪುನ್ನಯ್ಯ. ಇ. ಕೆ ನಾಯನಾರ್, ಇ. ಎಂ ಎಸ್. ಹಾಗೂ ಆಲ್ ಚೈನಾ ಯುತ್ ಫೆಡರೇಷನ್ನಿನ ಪರವಾಗಿ ಅದರ ಉಪಾಧ್ಯಕ್ಷ ಯಂಗ್‌ಲೀ ಹಾಗೂ ಮುಂತಾದವರು ಮಾತನಾಡಿದರು.

ಸಿ. ಐ. ಟಿ. ಯು. ಕೌನ್ಸಿಲ್ ನಿರ್ಣಯಗಳು

(5 ನೇ ಪುಟದಿಂದ)

ಸೀಮಿತ ಅಣು ಯುದ್ಧದ ಮೂಲಕ ಸೋವಿಯತ್ ಒಕ್ಕೂಟವನ್ನು ಸೋಲಿಸಿ ಸಮಾಜವಾದಿ ವ್ಯವಸ್ಥೆಯನ್ನು ನಾಶ ಮಾಡಲು ತನಗೆ ಸಾಧ್ಯವಿದೆಯೆಂದು ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ ನ್ಯೂಟ್ರಾನ್ ಬಾಂಬ್ ಹಾಕಿ ಸಮಾಜವಾದಿ ರಾಷ್ಟ್ರಗಳ ಎಲ್ಲ ಜೀವಿಗಳನ್ನೂ ನಾಶಮಾಡಿ ಆ ಭೂಪ್ರದೇಶಗಳನ್ನು ಸಾಮ್ರಾಜ್ಯ ಶಾಹಿಗಳು ಆಳಬಹುದೆಂಬ ಕ್ರೂರ ಕನಸನ್ನು ಅವರು ಕಾಣುತ್ತಿದ್ದಾರೆ. ಆದರೆ ಅಣು ಯುದ್ಧವು ಒಮ್ಮೆ ಆರಂಭವಾಯಿತೆಂದರೆ ಅದು ಯಾವುದೇ ದೇಶಕ್ಕೆ ಸೀಮಿತವಾಗಿ ಉಳಿಯಲಾರದೆಂದು ಇಂದು ಇಡೀ ಜಗತ್ತಿಗೇ ಗೊತ್ತಿದೆ. ಸೀಮಿತ ಯುದ್ಧದ ರೋಮಾಂಚಕಾರಿ ಕತೆಯನ್ನು ಸೃಷ್ಟಿಸಿ ಅಮೇರಿಕನ್ ರಜತಪರದೆಯ ಮಾಜಿ ನಾಯಕನಾದ ರೀಗನ್ ಆನಂದಿಸಬಲ್ಲನಾದರೂ ಅಮೇರಿಕದ ಸಾಮಾನ್ಯ ಜನತೆ ಈ ಕತೆಯನ್ನು ನಂಬುವಷ್ಟು ಮುಗ್ಧರಲ್ಲವೆಂಬುದು ರೀಗನ್‌ನ ಮಿಲಿಟರಿ ಧೋರಣೆಯ ವಿರುದ್ಧ ಇಂದು ಅಮೇರಿಕದಾದ್ಯಂತ ನಡೆಯುತ್ತಿರುವ ಪ್ರತಿಭಟನಾ ಚಳುವಳಿಗಳಿಂದ ವ್ಯಕ್ತವಾಗುತ್ತದೆ.

ಸೋವಿಯಟ್ ಯುನಿಯನ್ನಿನ ಪ್ರಬಲ ಪ್ರತಿರೋಧದಿಂದಾಗಿ ಕಳೆದ 38 ವರ್ಷಗಳಿಂದ ಜಗತ್ತು ಪರಮಾಣು ಯುದ್ಧದಿಂದ ರಕ್ಷಿಸಲ್ಪಟ್ಟಿದೆ. ಸಾಮ್ರಾಜ್ಯ ಶಾಹಿಗಳು ಪರಮಾಣು ದಾಳಿ ನಡೆಸದಂತೆ ತಡೆಯಲು ಸೋವಿಯಟ್ ಯುನಿಯನ್ ಅಗಾಧ ಪ್ರಮಾಣದ ಅತ್ಯಾಧುನಿಕ ಪರಮಾಣು ತಯಾರಿಸಿ ದಾಸ್ತಾನು ಮಾಡಿದೆ. ಆದರೆ ಯಾವುದೇ ಪರಿಸ್ಥಿತಿಯಲ್ಲೂ ಅಣ್ವಸ್ತ್ರವನ್ನು ಉಪಯೋಗಿಸುವ ಮೊದಲ ದೇಶ ತಾನು ಆಗಲಾರೆನೆಂದು ಸೋವಿಯಟ್ ಯುನಿಯನ್ ಘೋಷಿಸಿದೆ. ಯುದ್ಧಕೋರ ಅಮೇರಿಕನ್ ಶಾಹಿಯು ಇಂತಹ ಘೋಷಣೆ ಮಾಡಲು ಸಿದ್ಧವಿಲ್ಲ. ಯುದ್ಧಕೋರರ ವಿರುದ್ಧ ಜಗತ್ತಿಗೆ ರಕ್ಷಣೆ ನೀಡಲು ಆಧುನಿಕ ಶಸ್ತ್ರಾಸ್ತ್ರಗಳನ್ನು ಉತ್ಪಾದನೆ ಮಾಡುತ್ತಿರುವಾಗಲೇ ಸೋವಿಯಟ್ ಯುನಿಯನ್ ತನ್ನ ಸಮಾಜವಾದಿ ಧೋರಣೆಗೆ ಅನುಗುಣವಾಗಿ, ನಿಧಾನವಾಗಿಯಾದರೂ ನಿಶ್ಶಸ್ತ್ರೀಕರಣವನ್ನು ಜಾರಿಗೆ ತಂದು ವಿಶ್ವ ಶಾಂತಿಯನ್ನು ಸ್ಥಾಪಿಸಲು ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ. ವಿಶ್ವ ಶಾಂತಿಗಾಗಿ ಸೋವಿಯಟ್ ಯುನಿಯನ್ ನಡೆಸುತ್ತಿರುವ ಪ್ರಬಲ ಚಳುವಳಿಯು ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಯುದ್ಧಕೋರ ನೀತಿಯನ್ನು ಜಗತ್ತಿಗೇ ಬಹಿರಂಗಗೊಳಿಸುತ್ತದೆ ಯುದ್ಧವೆಂದರೇನೆಂಬುದನ್ನು ಸ್ವತಃ ಅನುಭವಿಸಿರುವ ಯುರೋಪಿನ ಬಂಡವಾಳ ಶಾಹಿ ರಾಷ್ಟ್ರಗಳ ಜನತೆ ತಮ್ಮ ಸರಕಾರಗಳ ಮೇಲೆ ಪ್ರಬಲ ಪ್ರತಿಭಟನೆಗಳನ್ನೂ, ತಮ್ಮ ಹಿರಿಯಣ್ಣ ಅಮೇರಿಕಾದೊಂದಿಗೆ ತೀವ್ರ ಭಿನ್ನಾಭಿಪ್ರಾಯಗಳನ್ನು ತಳೆಯಲಾರಂಭಿಸಿವೆ.

ಜಗತ್ತನ್ನೇ ತನ್ನ ಕಪಿಮುಷ್ಠಿಯಲ್ಲಿಡುವ ದುಸ್ಸಾಹಸದ ಅಂಗವಾಗಿ ಜಗತ್ತಿನ ವಿವಿಧ ಭಾಗಗಳಲ್ಲಿ ಯುದ್ಧದ ವಾತಾವರಣವನ್ನು ನಿರ್ಮಿಸುತ್ತಿದ್ದಾರೆ. ಜಗತ್ತಿನ ಮೂರನೇ ಒಂದು ಭಾಗವು ಬಂಡವಾಳ ಶಾಹಿ ಕೋಟೆಯ ಹೊರಗೆ ಇರುವುದರಿಂದ ಸಮಾಜವಾದದ ಕಡೆಗೆ ಇನ್ನಷ್ಟು ರಾಷ್ಟ್ರಗಳು ಹೋಗುವುದನ್ನು ತಪ್ಪಿಸಲು ಸಾಮ್ರಾಜ್ಯ ಶಾಹಿಗಳು ಅಪಾಯಕಾರಿ ತಂತ್ರಗಳನ್ನು ಅನುಸರಿಸುತ್ತಿದ್ದಾರೆ. ಒಂದೆಡೆ ಸಮಾಜವಾದಿ ರಾಷ್ಟ್ರಗಳ ಮೇಲೆ ಪರಮಾಣು ಯುದ್ಧದ ಬೆದರಿಕೆಯನ್ನು ಒಡ್ಡುವ ಮೂಲಕ ಈ ರಾಷ್ಟ್ರಗಳು ತಮ್ಮ ಸಂಪನ್ಮೂಲದ ದೊಡ್ಡ ಭಾಗವನ್ನು ಮಿಲಿಟರಿ ವೆಚ್ಚಕ್ಕಾಗಿ ಖರ್ಚು ಮಾಡುವ ಪರಿಸ್ಥಿತಿಯನ್ನು ನಿರ್ಮಿಸುತ್ತಾರೆ. ಇನ್ನೊಂದೆಡೆ ರಾಷ್ಟ್ರೀಯ ವಿಮೋಚನೆಗಾಗಿ ನಡೆಯುವ ಹೋರಾಟಗಳನ್ನು ಸದೆ ಬಡಿಯಲು ವಿವಿಧ ರಾಷ್ಟ್ರಗಳ ಬಂಡವಾಳ ಶಾಹಿ ಆಡಳಿತಗಳಿಗೆ ಸಹಾಯ ನೀಡುತ್ತಾರೆ. ಪ್ಯಾಲೆಸ್ಟೈನ, ದಕ್ಷಿಣ ಆಫ್ರಿಕಾ ಮತ್ತು ಎಲ್ ಸಾಲ್ವದೋರದಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಗಳನ್ನು ಸದೆ ಬಡಿಯುವ ಶಕ್ತಿಗಳಿಗೆ ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ನೇರವಾಗಿ ಸಹಾಯ ಮಾಡುತ್ತಿದೆ.

ಜಗತ್ತಿನ ಇತಿಹಾಸದಲ್ಲೇ ಹಿಂದೆಂದೂ ಕಂಡರಿಯದ ಬೃಹತ್ ಪ್ರಮಾಣದಲ್ಲಿ ಇಂದು ಶಾಂತಿ ಚಳುವಳಿಯು ನಡೆಯುತ್ತಿದೆ. ತೃತಿಯ ಜಗತ್ತಿನಲ್ಲಿ ಈ ಚಳುವಳಿಯು ರಾಷ್ಟ್ರೀಯ ವಿಮೋಚನಾ ಹೋರಾಟಗಳ ಅಂಗವಾಗಿ ಬೆಳೆದು ಬರುತ್ತಿದೆ. ಶಾಂತಿ ಚಳುವಳಿಗಳ ಮೂಲಕ ವಿಶ್ವಶಾಂತಿಯ ಪರಮ ಶತ್ರು ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಎಂಬುದನ್ನು ಜನರು ಗುರುತಿಸಿದ್ದಾರೆ. ಶಾಂತಿಯ ಕರೆಯು ಒಂದು ಅಧ್ಯಾತ್ಮಿಕ ಕರೆಯಲ್ಲ ; ಯುದ್ಧವನ್ನು ಕೊನೆಗೊಳಿಸಬೇಕೆಂಬ ಸಮರ ಶೀಲ ಕರೆ, ಯುದ್ಧ ಕೋರರು ತಮ್ಮ ಶಸ್ತ್ರಾಸ್ತ್ರಗಳನ್ನು ಮಾನವತೆಯ ನಾಶಕ್ಕಾಗಿ ಉಪಯೋಗಿಸಬಾರದೆಂಬ ಕರೆ, ಸಾಮ್ರಾಜ್ಯ ಶಾಹಿಯನ್ನು ನಿಶ್ಶಸ್ತ್ರಗೊಳಿಸುವ ಕರೆ; ಯುದ್ಧದ ವಿರುದ್ಧ ಸಮರ ಹೂಡುವ ಹೋರಾಟದ ಕರೆ.

1984 ಫೆಬ್ರುವರಿ 19 ಮತ್ತು 20 ರಂದು ದಾಂಡೇಲಿಯಲ್ಲಿ ಜರುಗಿದ ಸಿ. ಐ ಟಿ. ಯು. ಕರ್ನಾಟಕ ರಾಜ್ಯ ಮಂಡಳಿಯ ಸಭೆಯು ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಯುದ್ಧಕೋರ ನೀತಿಯನ್ನು ಬಲವಾಗಿ ಖಂಡಿಸುತ್ತದೆ. ಮತ್ತು ವಿಶ್ವಶಾಂತಿಗಾಗಿ ನಡೆಯುವ ಬೃಹತ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

(1ನೇ ಪುಟದಿಂದ)

ಬೆಂಗಳೂರಿನಲ್ಲಿ ಸೇರಿದ ವಿರೋಧ ಪಕ್ಷಗಳ ಸಮಾವೇಶದಲ್ಲಿ ಕಾ. ನಂಬೂದಿರಿಪಾಡ್ ಮತ್ತು ಡಾ|| ಅಬ್ದುಲ್ಲಾ ಗಂಟಾಘೋಷವಾಗಿ ಸಾರಿದರು, ಅಷ್ಟೇ ಅಲ್ಲ ಇಂಥ ಸರ್ವಾಧಿಕಾರಿ, ಪ್ರಜಾಪ್ರಭುತ್ವ ಸಂವಿಧಾನ ವಿರೋಧಿ ನಿಲುವಿನ ವಿರುದ್ಧ ಹೋರಾಡಲು ಪೇಟೆ, ಗ್ರಾಮಾಂತರ ಪ್ರದೇಶಗಳಲ್ಲಿ ಜನ ಜಾಗೃತಿ ಉಂಟುಮಾಡಿ, ಇಂದಿರಾ ಕಾಂಗ್ರೆಸ್ಸಿಗರ ಉರುಳಿಸುವ ಪ್ರಯತ್ನವನ್ನು ವಿಫಲಗೊಳಿಸಲು, ಅಂಥ ಪ್ರಯತ್ನ ಮುಂದುವರಿಯದಂತೆ ಮಾಡಲು ಸರ್ವ ಶಕ್ತಿ, ವಿಧಾನ ಉಪಯೋಗಿಸ ಬೇಕೆಂದು ಕರೆ ಕೊಟ್ಟಿರುವರು.

ಕಾರ್ಮಿಕರು, ರೈತರು, ವಿದ್ಯಾರ್ಥಿ ಯುವ ಜನತೆ, ಬುದ್ಧಿ ಜೀವಿಗಳು ಹಾಗೆಯೇ ಪ್ರಜಾಪ್ರಭುತ್ವದಲ್ಲಿ ನಿಷ್ಠೆ ಇರುವ ಪ್ರಜ್ಞಾವಂತರು, ಮತದಾನದ ಮೂಲಕ ಆರಿಸಿ ಬಂದು ಅಧಿಕಾರ ನಡೆಸುತ್ತಿರುವ ಸರಕಾರವನ್ನು ಉರುಳಿಸುವ ಯಾವ ಕ್ರಮವನ್ನೇ ಆಗಲಿ ಕೇಂದ್ರ ಸರಕಾರ, ಕಾಂಗ್ರೆಸ್ ಪಕ್ಷ ಅನುಸರಿಸಿದರೆ ಅಂಥ ಪ್ರಯತ್ನವನ್ನು ವಿಫಲ ಗೊಳಿಸಲು ಸರ್ವ ಶಕ್ತಿಯನ್ನೆಲ್ಲ ಉಪಯೋಗಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಸಾಮ್ರಾಜ್ಯಶಾಹಿ ಆಕ್ರಮಣ ಎದುರಿಸಿರಿ

ರಶ್ಯದವರು ತಮ್ಮ ಜೊತೆ ಮಾತು ಕತೆಗೆ ಬರುತ್ತಾರೆಂದೂ ರೇಗನ್ ಅಭಿಪ್ರಾಯ ಪಟ್ಟಿದ್ದರು. ಅದು ಸುಳ್ಳಾಯಿತು.

ಯುದ್ಧವನ್ನೆದುರಿಸುವ ತಯಾರಿಯನ್ನಷ್ಟೇ ಸಮತಾವಾದಿ ದೇಶಗಳು ಮಾಡುತ್ತಿಲ್ಲ, ಯುದ್ಧ ಆಗ ಬಾರದೆಂಬ ಉಪಾಯವನ್ನು ಕೈ ಗೊಂಡಿದ್ದಾರೆ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಗ್ರೆನೆಡಾದ ಮೇಲೆ ಅಮೇರಿಕ ನಡೆಸಿದ ಆಕ್ರಮಣದ ಪ್ರಶ್ನೆ ತಂದು ತಟಸ್ಥ ರಾಷ್ಟ್ರಗಳಲ್ಲದೆ ಇತರ ದೇಶಗಳೂ ಅಮೇರಿಕದ ವಿರುದ್ಧ ಮತ ನೀಡುವಂತೆ ಮಾಡಲು ಸಾಧ್ಯವಾಗಿದೆ. ಸೈಬೀರಿಯದಿಂದ ಗ್ಯಾಸ್ ಒದಗಿಸುವ ವಿಷಯದಲ್ಲಿಯೂ ಇಂಗ್ಲೆಂಡನ್ನೊಳಗೊಂಡು ಎಲ್ಲ ಬಂಡವಾಳ ಶಾಹಿ ರಾಷ್ಟ್ರಗಳು ಅಮೇರಿಕದ ನಿಲುವನ್ನು ವಿರೋಧಿಸುವಂತೆ ಮಾಡಿದೆ. ಸಾಮ್ರಾಜ್ಯ ಶಾಹಿ ರಾಷ್ಟ್ರಗಳೊಳಗೆ ವೈರುಧ್ಯ ಬೆಳೆಯುತ್ತಿದೆ. ಈ ವೈರುಧ್ಯವನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡು ಶಾಂತಿ ಚಳುವಳಿಯ ಕುರಿತು ಜನ ಜಾಗೃತಿ ಉಂಟುಮಾಡಿ ಅದೊಂದು ಚಳುವಳಿಯನ್ನಾಗಿ ಪರಿವರ್ತಿಸಬೇಕು. ದುಡಿಯುವ ಕಾರ್ಮಿಕ ವರ್ಗದ ಆದ್ಯ ಕರ್ತವ್ಯ ಇದಾಗಿದೆ.

(ಕರ್ನಾಟಕ ರಾಜ್ಯ ಸಮಿತಿ ಸಭೆ ಫೆ. 26-27 ರಂದು ಬೆಂಗಳೂರಿನಲ್ಲಿ ಸೇರಿತ್ತು.)

ಕ್ಯಾಪಿಟೇಶನ್ ಶುಲ್ಕ ರದ್ದಾಗಲಿ

ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಕೋರುವ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವ ಪದ್ಧತಿಯನ್ನು ರದ್ದು ಮಾಡಲಾಗುವುದೆಂದು ಜನತಾ ಪಕ್ಷ ತನ್ನ ಚುನಾವಣಾ ಘೋಷಣೆಯಲ್ಲಿ ಸಾರಿತ್ತು. ತಾವು ಅಧಿಕಾರ ಸ್ವೀಕಾರ ಮಾಡಿದ ನಂತರ ಈ ವಿಷಯದ ಕುರಿತು ವಿಶ್ಲೇಷಿಸಿ ವರದಿ ಮಾಡಲು ನೇಮಿಸಿದ್ದ ಸಿಂಧ್ಯಾ ಸಮಿತಿ ಕೂಡ ಕ್ಯಾಪಿಟೇಶನ್ ಶುಲ್ಕ ರದ್ದು ಮಾಡಬೇಕೆಂದು ಸೂಚಿಸಿತ್ತು.

ಆದರೆ ಹೆಗಡೆ ಸರಕಾರ ಇವೆರಡನ್ನೂ ತಳ್ಳಿ ಹಾಕಿ ಮುಂದಿನ 5 ವರ್ಷಗಳವರೆಗೆ ಹಣ ವಸೂಲಿ ಮಾಡ ಬಹುದೆಂಬ ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಈಗ ಅದು ಮಸೂದೆಯ ರೂಪದಲ್ಲಿ ಬಂದು ಶಾಸನ ಸಭೆಯ ಮಂಜೂರಾತಿಯನ್ನು ಪಡೆದಿದೆ. ಈ ಕ್ರಮ ಜನತೆಗಿತ್ತ ಆಶ್ವಾಸನೆಯನ್ನು ಪೂರೈಸುವುದರಲ್ಲಿ ವಿಫಲವಾಗಿರುವುದಷ್ಟೇ ಅಲ್ಲ. ಹೆಚ್ಚಿನ ಶಿಕ್ಷಣ ಪಡೆಯುವ ಯುವಕರಿಗೂ, ಮಕ್ಕಳ ಉಚ್ಚ ಶಿಕ್ಷಣ ಕೊಡಿಸಬೇಕೆಂದು ಆಶಿಸುವ ಪಾಲಕರಿಗೂ ಅನ್ಯಾಯ ಮಾಡಿದಂತಾಗಿದೆ.

ಹಿಂದೆ ರಾಜ್ಯದ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ (ಐ) ಈ ಅನಿಷ್ಟ ಪದ್ಧತಿಯನ್ನು ಜ್ಯಾರಿಯಲ್ಲಿ ತಂದಿತ್ತು. ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಕ್ಯಾಪಿಟೇಶನ್ ಶುಲ್ಕದ ಮೂಲಕ ಹಣ ಗಳಿಸಲು ಅವಕಾಶ ಮಾಡಿಕೊಟ್ಟಿರುವುದಷ್ಟೇ ಅಲ್ಲ, ತಮ್ಮ ಪಕ್ಷದವರೂ ಅಕ್ರಮವಾಗಿ ಹಣ ಗಳಿಸಲು ಅವಕಾಶ ಮಾಡಿ ಕೊಟ್ಟಿತ್ತು ನಿಜ. ಈ ಕ್ರಮಕ್ಕೆ ಹೇಸಿಕೊಂಡು ವಿದ್ಯಾರ್ಥಿಗಳು, ಪಾಲಕರೂ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಹಾಗೆಯೇ ಪ್ರಜ್ಞಾವಂತ ಜನ ಅದನ್ನು ವಿರೋಧಿಸುತ್ತ ಬಂದಿದ್ದರು. ಚುನಾವಣೆಯ ಸಮಯದಲ್ಲಿ ಜನತಾ ಪಕ್ಷ, ಸಿಪಿಐ ಮತ್ತು ಸಿಪಿಐ (ಎಂ) ಪಕ್ಷಗಳು ತಮಗೆ ಮತ ನೀಡಿದ್ದಲ್ಲಿ ಈ ಶುಲ್ಕ ರದ್ದು ಪಡಿಸುವುದಾಗಿ ತಂತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮತದಾರರಿಗೆ ಆಶ್ವಾಸನೆ ನೀಡಿರುವಾಗ, ಚುನಾವಣೆಯಲ್ಲಿ ಜಯಗಳಿಸಿ ಅಧಿಕಾರ ಪಡೆದ ನಂತರ ಮತದಾರರಿಗಿತ್ತ ಮಾತನ್ನು ಪೂರೈಸದೆ, ಮುಂದಿನ ಚುನಾವಣೆಯ ತನಕ ಹಣ ವಸೂಲಿ ಮಾಡುವ ಅವಕಾಶವನ್ನ ಖಾಸಗೀ ಶಿಕ್ಷಣ ಸಂಘ ಸಂಸ್ಥೆಗಳಿಗೆ ಕೊಟ್ಟಿರುವುದು ನಿಜವಾಗಿಯೂ ಮತದಾರರಿಗೆ ಮೋಸ ಮಾಡಿದಂತೆಯೇ ಸರಿ.

ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸ ಬೇಕೆಂಬ ಬೇಡಿಕೆಯನ್ನು ವಿದ್ಯಾರ್ಥಿಗಳೂ ಹಾಗೆಯೇ ಸಾರ್ವಜನಿಕರೂ ಮಂಡಿಸುತ್ತಿರುವಾಗ, ಹಾಗೆ ಮಾಡಿದ್ದಲ್ಲಿ ಆ ಸಂಸ್ಥೆಗಳಿಗೆ ಪರಿಹಾರ ಕೊಡಲು ಸರಕಾರದಲ್ಲಿ ಹಣ ವಿಲ್ಲೆಂಬ ನೆಪವನ್ನು ಕೇಳುತ್ತಿದ್ದೇವೆ. ಕೇಂದ್ರ ಸರಕಾರ ರೂ 9 ಕೋಟಿ ಕೊಟ್ಟರೆ ಕ್ಯಾಪಿಟೇಶನ್ ಶುಲ್ಕ ರದ್ದು ಮಾಡಲಾಗುವುದೆಂಬ ವಿಧಾನ ಸಭೆಯಲ್ಲಿ ಮಂತ್ರಿ ರಾಚಯ್ಯನವರ ಹೇಳಿಕೆ ತನ್ನ ಜವಾಬ್ದಾರಿಯನ್ನು ಹಾರಿಸಿ ಕೊಳ್ಳುವುದಾಗಿದೆ. ಹಾಗಿದ್ದಲ್ಲಿ ಚುನಾವಣೆಯ ಘೋಷಣೆಯಲ್ಲೇ ಈ ಅಂಶ ಸೇರಿಸಬಹುದಿತ್ತಲ್ಲ. ಅದು ನಿಜವಾದ ನೆಪವಲ್ಲವೇ ಅಲ್ಲ. ಅದು ಹೇಗೇ ಇರಲಿ, ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವುದನ್ನು ಕಾಯಿದೆ ಮೂಲಕ ರದ್ದು ಪಡಿಸಲು ಯಾವ ಆತಂಕವೂ ಇಲ್ಲ. ಆದ್ದರಿಂದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಇದರ ಕುರಿತು ದೃಢ ನಿಲುವು ತಳೆಯುವುದು ಅತ್ಯಗತ್ಯ. ಇಲ್ಲವಾದರೆ ಜನತೆಯ ಅಸಮಾಧಾನವನ್ನು, ವಿರೋಧವನ್ನೂ ಎದುರಿಸ ಬೇಕಾದೀತು.

FORM IV

(See Rule 8)

1. Place of Publication : BANGALORE
2. Periodicity of its publication : WEEKLY
3. Printer's Name : P. RAMACHANDRA RAO
   Whether Citizen of India ? : YES
   Address ; L-56, K. V, Temple Street, Sultanpet Bangalore-53.
4. Pablisher's Name : P. RAMACHANDRA RAO
   Whether Citizen of India? : YES
   Address : L-56, K. V. Temple Street, Sultanpet, Bnagalore-53.
5. Editor's Name : P. RAMACHANDRA RAO
   Whether Citizen of India? : YES
   Address : L-56, K. V. Temple Street, SultanPet, Bangalore-53

Names and addresses of individuals who own the News paper and partners or Share holders holding more than one percent of the total capital. — Communist party of India (Marxist) Karnataka State Committee, L-56, K. V. Temple Street, Sultanpet, Bangalore-53

I P. RAMACHANDRA RAO hereby declare that the particulars given above are true to the best of my knowledge and belief.

4-3-84

P. RAMACHANDRA RAO
Signature of publisher

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L 56, K. V. Temple Street, Sultanpet. B-53. Phone : 24154

Editor : P. Ramachandra Rao